## ಡಾ|| ರಾಜ್‌ಕುಮಾರ್ ಅಕಾಡೆಮಿ ಬೆಂಗಳೂರು

ಡಾ|| ರಾಜ್‌ಕುಮಾರ್ ಕುಟುಂಬದವರ ಕೊಡುಗೆ

# ವಾರದ ಸುದ್ದಿ ಸಂಕಲನ

## ಸ್ಪಷ್ಟ ಮತ್ತು ಸಮಗ್ರ ವಿದ್ಯಮಾನಗಳು

**ಮೇ 1ನೇ ವಾರ**

04-05-2026 TO 09-05-2026

# ಆರ್‌ಟಿಐ: ಸಂಗಾತಿಯ ಆದಾಯ ವಿವರ ಬಹಿರಂಗ ಸಲ್ಲ

- ಅಳಿವಿನಂಚಿನ 23 ರಣಹದ್ದು ಪತ್ತೆ
- ಬಂಡೆಗಲ್ಲು ಶಾಸನ ಪತ್ತೆ
- ಉತ್ಪಾದನಾ ಕೋಟಾ ಹೆಚ್ಚಿಸಿದ "ಒಪೆಕ್+
- ಸ್ಪೇಸ್‌ಎಕ್ಸ್‌ನಿಂದ 'ದೃಷ್ಟಿ' ಉಪಗ್ರಹ ಉಡ್ಡಯನ

## ಆರ್‌ಟಿಐ: ಸಂಗಾತಿಯ ಆದಾಯ ವಿವರ ಬಹಿರಂಗ ಸಲ್ಲ

ನವದೆಹಲಿ (ಪಿಟಿಐ): ಮಾಹಿತಿ ಹಕ್ಕು ಕಾಯ್ದೆಯಡಿ (ಆರ್‌ಟಿಐ) ಅರ್ಜಿ ಸಲ್ಲಿಸುವ ಮೂಲಕ ಯಾವುದೇ ವ್ಯಕ್ತಿಯು ತನ್ನ ಸಂಗಾತಿಯ ಆದಾಯದ ವಿವರಗಳನ್ನು ಪಡೆಯಲು ಸಾಧ್ಯವಿಲ್ಲ ಎಂದು ದೆಹಲಿ ಹೈಕೋರ್ಟ್ ತೀರ್ಪು ನೀಡಿದೆ. ಕಾಯ್ದೆಯ ಸೆಕ್ಷನ್ 8(1)(ಜೆ) ಅಡಿಯಲ್ಲಿ ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸದ ಹೊರತು, ವೈಯಕ್ತಿಕ ಮಾಹಿತಿ ಬಹಿರಂಗಪಡಿಸುವುದಕ್ಕೆ ವಿನಾಯಿತಿಯಿದೆ ಎಂದು ನ್ಯಾಯಮೂರ್ತಿ ಪುರುಷೇಂದ್ರ ಕುಮಾರ್ ಕೌರವ್ ತಿಳಿಸಿದ್ದಾರೆ.

## ‘ಆರ್‌ಟಿಐ: ಸಂಗಾತಿಯ ಆದಾಯ ವಿವರ ಬಹಿರಂಗ ಸಲ್ಲ’

**ಮುಖ್ಯಾಂಶಗಳು**

- ವೈಯಕ್ತಿಕ ಮಾಹಿತಿ ನೀಡಲು ಅವಕಾಶವಿಲ್ಲ: ದೆಹಲಿ ಹೈಕೋರ್ಟ್
- ಸಿಐಸಿ ನೀಡಿದ್ದ ಆದೇಶ ರದ್ದು

ನವದೆಹಲಿ (ಪಿಟಿಐ): ಮಾಹಿತಿ ಹಕ್ಕು ಕಾಯ್ದೆಯಡಿ (ಆರ್‌ಟಿಐ) ಅರ್ಜಿ ಸಲ್ಲಿಸುವ ಮೂಲಕ ಯಾವುದೇ ವ್ಯಕ್ತಿಯು ತನ್ನ ಸಂಗಾತಿಯ ಆದಾಯದ ವಿವರಗಳನ್ನು ಪಡೆಯಲು ಸಾಧ್ಯವಿಲ್ಲ ಎಂದು ದೆಹಲಿ ಹೈಕೋರ್ಟ್ ತೀರ್ಪು ನೀಡಿದೆ.

ಕಾಯ್ದೆಯ ಸೆಕ್ಷನ್ 8(1)(ಜೆ) ಅಡಿಯಲ್ಲಿ ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸದ ಹೊರತು, ವೈಯಕ್ತಿಕ ಮಾಹಿತಿ ಬಹಿರಂಗಪಡಿಸುವುದಕ್ಕೆ ಅವಕಾಶವಿಲ್ಲ. ಸುಪ್ರೀಂ ಕೋರ್ಟ್ ಪ್ರಕಾರ, ವ್ಯಕ್ತಿಯ ಆದಾಯ ತೆರಿಗೆ ರಿಟರ್ನ್‌ಗಳು ಆ ವರ್ಗಕ್ಕೆ ಸೇರುತ್ತವೆ ಎಂದು ನ್ಯಾಯಮೂರ್ತಿ ಪುರುಷೇಂದ್ರ ಕುಮಾರ್ ಕೌರವ್ ತಿಳಿಸಿದ್ದಾರೆ.


ಅರ್ಜಿದಾರರ ಪತಿಯ ತೆರಿಗೆ ಒಳಪಡುವ ಆದಾಯದ ವಿವರಗಳನ್ನು ಬಹಿರಂಗಪಡಿಸುವಂತೆ ಆದಾಯ ತೆರಿಗೆ ಅಧಿಕಾರಿಗಳಿಗೆ ನಿರ್ದೇಶಿಸಿ ಕೇಂದ್ರ ಮಾಹಿತಿ ಆಯುಕ್ತರು (ಸಿಐಸಿ) ನೀಡಿದ್ದ 2021ರ ಆದೇಶವನ್ನು ಪ್ರಶ್ನಿಸಿ, ಅವರ ಪತಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ಹೈಕೋರ್ಟ್‌ನಲ್ಲಿ ನಡೆಯಿತು.

ಸಿಐಸಿ ನೀಡಿದ್ದ ಆದೇಶವನ್ನು ಕಾನೂನುಬದ್ಧವಲ್ಲ ಎಂದು ರದ್ದುಗೊಳಿಸಿದ ಹೈಕೋರ್ಟ್, ಪತ್ನಿ ಕೋರಿದ ಮಾಹಿತಿಯು ಅರ್ಜಿದಾರರ ವೈಯಕ್ತಿಕ ಮಾಹಿತಿಯಾಗಿದ್ದು, ಅದು ಸಾರ್ವಜನಿಕ ಹಿತಾಸಕ್ತಿ ಅಡಿಯಲ್ಲಿ ಬರುವುದಿಲ್ಲ ಎಂದು ಏಪ್ರಿಲ್ 28ರಂದು ತೀರ್ಪು ನೀಡಿದೆ.

ಸಾರ್ವಜನಿಕ ಅಧಿಕಾರಿಗಳ ಕೆಲಸದಲ್ಲಿ ಪಾರದರ್ಶಕತೆಯನ್ನು ಉತ್ತೇಜಿಸಲು ಆರ್‌ಟಿಐ ಕಾಯ್ದೆ ಜಾರಿಗೆ ತರಲಾಗಿದೆ. ಸಾರ್ವಜನಿಕರ ಮೇಲೆ ಯಾವುದೇ ಪರಿಣಾಮ ಬೀರದ ವ್ಯಕ್ತಿಗಳ ವೈಯಕ್ತಿಕ ಮಾಹಿತಿಯನ್ನು ಬಹಿರಂಗಪಡಿಸಲು ಈ ಕಾಯ್ದೆ ಅವಕಾಶ ನೀಡುವುದಿಲ್ಲ ಎಂದು ತೀರ್ಪಿನಲ್ಲಿ ಉಲ್ಲೇಖಿಸಲಾಗಿದೆ.

ಪತಿಯಿಂದ ಸೂಕ್ತ ಎನ್ನುವಷ್ಟು ಜೀವನಾಂಶ ಪಡೆಯುವುದಕ್ಕೆ ಪೂರಕವಾಗಿ ನಿರ್ವಹಣಾ ಹಕ್ಕು ಪ್ರತಿಪಾದಿಸಲು ಆರ್‌ಟಿಐ ಕಾಯ್ದೆಯಡಿ ಅವರ ಆದಾಯದ ವಿವರಗಳನ್ನು ಪಡೆಯುವ ಅಗತ್ಯವಿದೆ ಎಂದು ಪತ್ನಿ ವಾದಿಸಿದರು.

ಈ ವಾದವನ್ನು ಒಪ್ಪದ ನ್ಯಾಯಾಲಯ, ಎರಡೂ ಕಡೆಯವರು ತಮ್ಮ ಆದಾಯ, ಆಸ್ತಿ ಮತ್ತು ಹೊಣೆಗಾರಿಕೆಗಳ ಕುರಿತು ಪ್ರಮಾಣ ಪತ್ರಗಳನ್ನು ಸಲ್ಲಿಸಿ ಪರಿಹಾರಗಳನ್ನು ಪಡೆದುಕೊಳ್ಳಲು ಕಾನೂನಿನಲ್ಲಿ ಅವಕಾಶವಿದೆ ಎಂದು ಹೇಳಿದೆ.



# ಪಶ್ಚಿಮ ಏಷ್ಯಾದಲ್ಲಿ ಯುದ್ಧ

# ಭಾರತದಲ್ಲಿ ಕೃಷಿ ಬಿಕ್ಕಟ್ಟು ತೀವ್ರ

ಅಮೆರಿಕ–ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧದಿಂದ ತೈಲ–ಅನಿಲ ಪೂರೈಕೆ, ಕೈಗಾರಿಕೆ ಸೇರಿದಂತೆ ಭಾರತದ ಹಲವು ವಲಯಗಳಲ್ಲಿ ಬಿಕ್ಕಟ್ಟು ತಲೆದೋರಿದೆ. ಕೃಷಿ ರಂಗದ ಮೇಲೂ ಯುದ್ಧದ ಕರಿಮೋಡ ಆವರಿಸಿಕೊಳ್ಳುತ್ತಿದೆ. ಒಂದೆಡೆ, ಯುದ್ಧದಿಂದ ಪಶ್ಚಿಮ ಏಷ್ಯಾದ ದೇಶಗಳಿಗೆ ಭಾರತದಿಂದ ಆಹಾರ ಧಾನ್ಯ, ಹಣ್ಣು ಮುಂತಾದವುಗಳ ರಫ್ತು ಬಂದ್ ಆಗಿದೆ. ಇನ್ನೊಂದೆಡೆ, ರಾಸಾಯನಿಕ ಗೊಬ್ಬರ ಉತ್ಪಾದನೆ, ಆಮದಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ. ಯುದ್ಧ ಇನ್ನು ಅಲ್ಪಕಾಲ ಮುಂದುವರಿದರೂ ದೇಶದ ಕೃಷಿ ಕ್ಷೇತ್ರದ ಮೇಲೆ ದೀರ್ಘಕಾಲದ ಪರಿಣಾಮಗಳು ಉಂಟಾಗಲಿವೆ. ದೇಶದಲ್ಲಿ ಆಹಾರ ಹಣದುಬ್ಬರ ಮತ್ತಷ್ಟು ಹೆಚ್ಚಾಗಲೂ ಇದು ಕಾರಣವಾಗುವ ಸಂಭವ ಇದೆ



ಹರಿಯಾಣದ ಲೋಹಾರು ಗ್ರಾಮದ ಮಹಿಳೆ ಗೋಧಿ ಕೊಯ್ಲಿನಲ್ಲಿ ತೊಡಗಿರುವುದು ಪಿಟಿಐ ಚಿತ್ರ

## ‘ಕೊರತೆ ಇಲ್ಲ’

ಮುಂಗಾರಿಗೆ ಕೇಂದ್ರ ಕೃಷಿ ಇಲಾಖೆಯು ಸಜ್ಜಾಗಿದ್ದು, ದೇಶದಲ್ಲಿ ಬೀಜ, ಗೊಬ್ಬರ ಸೇರಿದಂತೆ ಯಾವ ಕೊರತೆಯೂ ಇಲ್ಲ ಎಂದು ಕೇಂದ್ರ ಸರ್ಕಾರವು ತಿಳಿಸಿದೆ. ಭತ್ತ, ಸೋಯಾಬೀನ್, ಮೆಕ್ಕೆಜೋಳ, ಶೇಂಗಾ ಮುಂತಾದ ಪ್ರಮುಖ ಬೆಳೆಗಳ 1.67 ಕೋಟಿ ಕ್ವಿಂಟಲ್ ಬೀಜ ಅಗತ್ಯವಿದ್ದರೆ, 1.86 ಕೋಟಿ ಕ್ವಿಂಟಲ್ ದಾಸ್ತಾನಿದೆ. ಮುಂಗಾರು ಹಂಗಾಮಿಗೆ 3.9 ಕೋಟಿ ಟನ್ (ಎಲ್‌ಎಂಟಿ) ರಸಗೊಬ್ಬರ ಅಗತ್ಯವಿದ್ದರೆ, ಸುಮಾರು 1.8 ಕೋಟಿ ಟನ್, ಅಂದರೆ ಶೇ 46ರಷ್ಟು ಆರಂಭಿಕ ದಾಸ್ತಾನು ಈಗಾಗಲೇ ಲಭ್ಯವಿದೆ. ಆರಂಭದಲ್ಲಿ ಮೂರನೇ ಒಂದರಷ್ಟು ಪ್ರಮಾಣದ ರಸಗೊಬ್ಬರ ದಾಸ್ತಾನಿದ್ದರೂ, ರೈತರ ಮುಂಗಾರು ಹಂಗಾಮಿನ ಬೇಡಿಕೆಯನ್ನು ಈಡೇರಿಸಬಹುದು ಎಂದು ಇಲಾಖೆ ತಿಳಿಸಿದೆ.

## ರಸಗೊಬ್ಬರ ಉತ್ಪಾದನೆ ಕುಸಿತ

- **76.09** ಲಕ್ಷ ಟನ್ — 2025ರ ಮಾರ್ಚ್ 1- ಏಪ್ರಿಲ್ 30 ನಡುವೆ ದೇಶದಲ್ಲಿ ಉತ್ಪಾದನೆಯಾದ ರಸಗೊಬ್ಬರದ ಪ್ರಮಾಣ
- **64** ಲಕ್ಷ ಟನ್ — 2026ರ ಮಾರ್ಚ್ -ಏಪ್ರಿಲ್ ನಡುವೆ ದೇಶದಲ್ಲಿ ಉತ್ಪಾದನೆಯಾದ ರಸಗೊಬ್ಬರದ ಪ್ರಮಾಣ
- **46.67** ಲಕ್ಷ ಟನ್ — 2025ರ ಮಾರ್ಚ್-ಏಪ್ರಿಲ್ ನಡುವೆ ದೇಶದಲ್ಲಿ ಉತ್ಪಾದನೆಯಾದ ಯೂರಿಯಾ ಪ್ರಮಾಣ
- **25.42** ಲಕ್ಷ ಟನ್ — 2026ರ ಮಾರ್ಚ್-ಏಪ್ರಿಲ್ ನಡುವೆ ದೇಶದಲ್ಲಿ ಉತ್ಪಾದನೆಯಾದ ಯೂರಿಯಾ ಪ್ರಮಾಣ
- **20%- 25%** — ಕೊಲ್ಲಿ ರಾಷ್ಟ್ರಗಳಿಂದ ಭಾರತವು ಆಮದು ಮಾಡಿಕೊಳ್ಳುವ ರಸಗೊಬ್ಬರದ ಪ್ರಮಾಣ

• ಬಿ.ವಿ.ಶ್ರೀನಾಥ್

ಕರ್ನಾಟಕವೂ ಸೇರಿದಂತೆ ಭಾರತದ ಹಲವೆಡೆ ಮಳೆಯಾಗುತ್ತಿದ್ದು, ಕೃಷಿಕರು ಹೊಲ ಹದಗೊಳಿಸುವ ಕೆಲಸ ಆರಂಭಿಸಿದ್ದಾರೆ. ರಾಜ್ಯದಲ್ಲಿ ಬಹುತೇಕ ರೈತರು ಜೂನ್ ತಿಂಗಳಲ್ಲಿ ಬಿತ್ತನೆ ಮಾಡುತ್ತಾರೆ. ಆದರೆ, ಈ ಬಾರಿ ಇರಾನ್ ಯುದ್ಧವು ಹಲವು ರೀತಿಗಳಲ್ಲಿ ಕೃಷಿ ವಲಯದ ಮೇಲೆ ಪರಿಣಾಮ ಬೀರಲಿದ್ದು, ರೈತರಲ್ಲಿ ಆತಂಕ ಮೂಡಿದೆ. ತೈಲ ಮತ್ತು ರಸಗೊಬ್ಬರ ಪೂರೈಕೆ ವ್ಯವಸ್ಥೆಗೆ ಜಾಗತಿಕ ಮಟ್ಟದಲ್ಲಿ ಅಡಚಣೆ ಉಂಟಾಗಿದ್ದು, ಭಾರತದಲ್ಲಿಯೂ ಇದು ಕೃಷಿ ಉತ್ಪಾದನೆ ಮತ್ತು ಆಹಾರ ಭದ್ರತೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಸಂಭವ ಇದೆ.

## ಆಹಾರ ಹಣದುಬ್ಬರ ಏರಿಕೆ

ಭಾರತದ ಆಹಾರ ಹಣದುಬ್ಬರವು 2024ರಲ್ಲಿ ಸಾಕಷ್ಟು ಏರಿಳಿತ ಕಂಡ ನಂತರ 2025ರಲ್ಲಿ ಗ್ರಾಹಕರಿಗೆ ಅಲ್ಪಮಟ್ಟದ ಸಮಾಧಾನ ನೀಡಿತ್ತು. ಗ್ರಾಹಕ ಆಹಾರ ಬೆಲೆ ಸೂಚ್ಯಂಕವು (ಸಿಎಫ್‌ಪಿಐ) ವರ್ಷದ ಬಹುತೇಕ ತಿಂಗಳುಗಳಲ್ಲಿ ಸ್ಥಿರವಾಗಿತ್ತು ಮತ್ತು ಕೆಲವೊಮ್ಮೆ ಇಳಿಕೆಯೂ ಆಗಿತ್ತು. ಆದರೆ, 2026ರ ಆರಂಭದಿಂದಲೇ ಆಹಾರ ಹಣದುಬ್ಬರವು ಏರತೊಡಗಿದೆ. ಜನವರಿಯಲ್ಲಿ ಶೇ 2.13ರಷ್ಟಿದ್ದ ಈ ಪ್ರಮಾಣವು ಫೆಬ್ರುವರಿಯ ಹೊತ್ತಿಗೆ ಶೇ 3.47ಕ್ಕೆ ಏರಿಕೆಯಾಗಿತ್ತು. ಮಾರ್ಚ್‌ನಲ್ಲಿ ಶೇ 3.87ಕ್ಕೆ ಏರಿದ್ದ ಆಹಾರ ಹಣದುಬ್ಬರವು ಏಪ್ರಿಲ್‌ನಲ್ಲಿ ಶೇ 4ಕ್ಕಿಂತ ಹೆಚ್ಚಾಗಬಹುದು ಎಂದು ಅಂದಾಜಿಸಲಾಗಿದೆ.

ಜಗತ್ತಿನ ಹಲವು ರಾಷ್ಟ್ರಗಳಲ್ಲಿಯೂ ಕೃಷಿ ಕ್ಷೇತ್ರದ ಮೇಲೆ ಯುದ್ಧ ಪರಿಣಾಮ ಬೀರಿದೆ. ಮುಂದಿನ ದಿನಗಳಲ್ಲಿ ಆಹಾರ ಧಾನ್ಯಗಳ ಬೇಡಿಕೆ ಹೆಚ್ಚಾಗಿ, ಬೆಲೆ ಹೆಚ್ಚಾಗುವ ಸಾಧ್ಯತೆ ಇದೆ. ಹೀಗಾಗಿ ಮುಂದಿನ ದಿನಗಳಲ್ಲಿ ಆಹಾರ ಹಣದುಬ್ಬರವು ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ ಎಂದು ಆರ್ಥಿಕ ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

ಚೀನಾ ಮತ್ತು ರಷ್ಯಾ ಕೂಡ ತಮ್ಮ ರಫ್ತು ಪ್ರಮಾಣವನ್ನು ಕಡಿಮೆ ಮಾಡಿವೆ. ಇದು ಸಮಸ್ಯೆಯನ್ನು ಮತ್ತಷ್ಟು ಉಲ್ಬಣಗೊಳಿಸಿದೆ.

**ತೈಲ ಕೊರತೆಯ ಪೆಟ್ಟು:** ಸ್ವಾತಂತ್ರ್ಯಗಳಿಸಿದ ಹೊಸದರಲ್ಲಿ ದೇಶದಲ್ಲಿ ಕೇವಲ 5 ಸಾವಿರ ಟ್ರ್ಯಾಕ್ಟರ್‌ಗಳಿದ್ದವು. ಆದರೆ, 2025–26ನೇ ಸಾಲಿನಲ್ಲಿ 11.6 ಲಕ್ಷ ಟ್ರ್ಯಾಕ್ಟರ್‌ಗಳು ಮಾರಾಟವಾಗಿವೆ. ಹೊಲ ಉಳುವುದರಿಂದ ಹಿಡಿದು ಧಾನ್ಯ ಸಾಗಣೆ, ಮಾರುಕಟ್ಟೆ ಇತ್ಯಾದಿ ಸಂದರ್ಭಗಳಲ್ಲಿ ಟ್ರ್ಯಾಕ್ಟರ್ ಬಳಕೆ ವ್ಯಾಪಕವಾಗಿದೆ. ತೈಲವು ಇಂದು ಕೃಷಿ ರಂಗದ ಅತ್ಯಂತ ಮೂಲಭೂತ ಅಗತ್ಯಗಳಲ್ಲಿ ಒಂದಾಗಿದೆ. ಪ್ರಸ್ತುತ ದೇಶದಲ್ಲಿ ಪೆಟ್ರೋಲ್, ಡೀಸೆಲ್ ಪೂರೈಕೆ ಸಮರ್ಪಕವಾಗಿಯೇ ಇದೆ. ಆದರೆ, ಸಿಎನ್‌ಜಿ ಸಿಗದೇ ಆಟೋಗಳ ಸಂಚಾರಕ್ಕೆ ಅಡ್ಡಿ ಉಂಟಾಗಿ ಅವರು ಅನುಭವಿಸಿದ ಸಂಕಷ್ಟದ ಸ್ಥಿತಿಯು ರೈತರನ್ನು

ಹಸಿರು ಕ್ರಾಂತಿಯ ಪೂರ್ವದಲ್ಲಿ ಭಾರತದ ಕೃಷಿ ವಲಯ ಕಚ್ಚಾ ವಸ್ತುಗಳ ವಿಚಾರದಲ್ಲಿ ಬಹುಮಟ್ಟಿಗೆ ಸ್ವಾವಲಂಬಿಯಾಗಿತ್ತು. ಉಳಲು ಎತ್ತುಗಳು, ಧಾನ್ಯ ಸಾಗಣೆಗೆ ಎತ್ತಿನ ಬಂಡಿಗಳು, ಹೊಲಕ್ಕೆ ಹಾಕಲು ಕೊಟ್ಟಿಗೆ ಗೊಬ್ಬರ ಹೀಗೆ ರೈತರ ಅವಲಂಬನೆ ಮತ್ತು ಖರ್ಚು ಮಿತವಾಗಿತ್ತು. ಸಾರಜನಕ (ನೈಟ್ರೋಜನ್-ಎನ್), ಪಾಸ್ಪರಸ್ (ಪಿ) ಮತ್ತು ಪೊಟ್ಯಾಷಿಯಂ (ಪಿ) ಮುಂತಾದ ರಾಸಾಯನಿಕಗಳನ್ನು ಹೊಂದಿದ್ದ ರಸಗೊಬ್ಬರಗಳ ಬಳಕೆ 69,800 ಟನ್‌ಗಳಷ್ಟಿತ್ತು (1950–51). ಕೇರಳದ ಕೊಚ್ಚಿ ಸಮೀಪ ಟ್ರಾವನ್‌ಕೋರ್‌ನಲ್ಲಿ ಮಾತ್ರ ರಸಗೊಬ್ಬರ ಕಾರ್ಖಾನೆ ಇತ್ತು. ಆದರೆ, 2024–25ನೇ ಸಾಲಿನಲ್ಲಿ ಎನ್‌ಪಿಕೆ ಆಧರಿಸಿದ ರಸಗೊಬ್ಬರಗಳು 3.29 ಕೋಟಿ ಟನ್ ಮಾರಾಟವಾಗಿವೆ. ಜಗತ್ತಿನಲ್ಲಿ ರಸಗೊಬ್ಬರಗಳ ಬಳಕೆಯಲ್ಲಿ ಚೀನಾ ಮೊದಲ ಸ್ಥಾನದಲ್ಲಿದ್ದರೆ, ಭಾರತ ಎರಡನೇ ಸ್ಥಾನದಲ್ಲಿದೆ. ದೇಶವು ರಸಗೊಬ್ಬರ ಉತ್ಪಾದನೆಯಲ್ಲಿ ಜಗತ್ತಿನಲ್ಲಿ ಮೂರನೇ ಸ್ಥಾನದಲ್ಲಿದೆ. ಆದರೆ, ಇಂದಿಗೂ ಆಮದಿನ ಮೇಲೆ ಹೆಚ್ಚು ಅವಲಂಬಿತವಾಗಿದೆ.

**ಉತ್ಪಾದನೆ ಕುಸಿತ:** ಡೈಅಮೋನಿಯಂ ಫಾಸ್ಫೇಟ್ (ಡಿಎಪಿ) ಮತ್ತು ಯೂರಿಯಾ ಇಂದು ದೇಶದ ರೈತರು ಬಳಸುವ ಪ್ರಮುಖ ರಸಗೊಬ್ಬರಗಳಾಗಿವೆ. ಇವುಗಳ ತಯಾರಿಕೆಗೆ ಅಗತ್ಯವಾದ ಕಚ್ಚಾ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲದ ಪೈಕಿ ಶೇ 50ರಷ್ಟನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ಈ ಅವಲಂಬನೆ ಈಗ ದೇಶದ ಕೃಷಿರಂಗವನ್ನು ಬಿಕ್ಕಟ್ಟಿಗೆ ತಳ್ಳಿದೆ. ಕಚ್ಚಾ ವಸ್ತುಗಳ ಕೊರತೆಯಿಂದ ದೇಶದಲ್ಲಿ ರಸಗೊಬ್ಬರಗಳ ಉತ್ಪಾದನೆಯಲ್ಲಿ ಕುಸಿತ ಉಂಟಾಗಿದೆ.

ಇನ್ನೊಂದೆಡೆ, ಭಾರತವು ತನ್ನ ಅಗತ್ಯದ ಶೇ 20– ಶೇ 25ರಷ್ಟು ರಸಗೊಬ್ಬರಗಳನ್ನು ಕೊಲ್ಲಿ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುತ್ತಿದೆ. ಅವು ಬಹುತೇಕ ಹೊರ್ಮುಜ್ ಜಲಸಂಧಿ ಮೂಲಕವೇ ಸಾಗಣೆಯಾಗುತ್ತಿದ್ದವು. ಆದರೆ, ಈಗ ಯುದ್ಧದಿಂದ ಪೂರೈಕೆ ಸರಪಳಿಗೆ ಹೊಡೆತ ಬಿದ್ದಿದೆ. ಭಾರತಕ್ಕೆ ಗಮನಾರ್ಹ ಪ್ರಮಾಣದಲ್ಲಿ ರಸಗೊಬ್ಬರಗಳನ್ನು ರಫ್ತು ಮಾಡುತ್ತಿದ್ದ



ಅಲ್ಪಮಟ್ಟಿಗೆ ಆಧೀರರನ್ನಾಗಿಸಿದೆ. ಜತೆಗೆ, ತೈಲದ ಕೊರತೆ ಉಂಟಾದರೆ, ಉತ್ಪಾದನಾ ವೆಚ್ಚವೂ ಹೆಚ್ಚಳವಾಗುತ್ತದೆ.

ಭಾರತದಲ್ಲಿ ಕೃಷಿಯನ್ನು ಮಳೆಯೊಂದಿಗಿನ ಜೂಜಾಟ ಎಂದು ಹಿಂದಿನಿಂದಲೂ ಕರೆಯಲಾಗುತ್ತಿದೆ. ಆದರೆ, ಬದಲಾದ ಕಾಲಮಾನದಲ್ಲಿ ರೈತರು ಸರ್ಕಾರದ ನೀತಿ ನಿಯಮಗಳು, ತೀವ್ರ ಹವಾಮಾನ ವೈಪರೀತ್ಯಗಳು ಮತ್ತು ಜಾಗತಿಕ ಬಿಕ್ಕಟ್ಟುಗಳ ಪರಿಣಾಮಗಳನ್ನೂ ಎದುರಿಸಬೇಕಾಗಿದೆ. ಭಾರತದ ರೈತರು ಬೆಳೆ ಬೆಳೆಯಲು ರಸಗೊಬ್ಬರಗಳ ಮೇಲೆ ಅವಲಂಬಿತರಾಗಿದ್ದರೆ, ಸರ್ಕಾರವು ಆ ರಸಗೊಬ್ಬರಕ್ಕಾಗಿ ಆಮದನ್ನು ಅವಲಂಬಿಸಿದೆ. ಭಾರತದಲ್ಲಿ ಮಳೆಗಾಲ ಆರಂಭವಾಗುತ್ತಿರುವುದರಿಂದ ಸಹಜವಾಗಿಯೇ ರೈತರಲ್ಲಿ ಆತಂಕ ಮೂಡಿದೆ. ಪ್ರಸ್ತುತ ಯುದ್ಧಕ್ಕೆ ಕದನ ವಿರಾಮ ಘೋಷಿಸಲಾಗಿದೆ. ಆದರೆ, ಅಂತ್ಯವಾಗಿಲ್ಲ. ಈಗ ಯುದ್ಧ ನಿಂತರೂ, ಅದರ ಪರಿಣಾಮಗಳು, ಅದು ಪೂರೈಕೆ ವ್ಯವಸ್ಥೆಗೆ ಮಾಡಿರುವ ಹಾನಿ ಸರಿಯಾಗಲು ಅನೇಕ ತಿಂಗಳುಗಳೇ ಬೇಕು. ಯುದ್ಧವು ಈಗಾಗಲೇ ಹಲವು ವಲಯಗಳ ಮೇಲೆ ಪರಿಣಾಮ ಉಂಟುಮಾಡಿದೆ. ಆದರೆ, ದೇಶದಲ್ಲಿ ಅತಿ ಹೆಚ್ಚು ಜನರಿಗೆ ಉದ್ಯೋಗ ನೀಡಿರುವ, ಈಗಾಗಲೇ ಹಲವು ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿರುವ ಕೃಷಿ ಕ್ಷೇತ್ರಕ್ಕೆ ಯುದ್ಧದಿಂದ ಹೆಚ್ಚು ಹಾನಿಯಾದರೆ, ಅದರ ಪರಿಣಾಮಗಳು ತೀವ್ರವಾಗಿರುತ್ತವೆ. ದೇಶದ ಆಹಾರ ಭದ್ರತೆಗೂ ಇದು ಭಂಗ ತರುತ್ತದೆ.

## ಕೊಳೆಯುತ್ತಿರುವ ಹಣ್ಣು, ತುಂಬಿದ ದಾಸ್ತಾನು

ಹೊರ್ಮುಜ್ ಜಲಸಂಧಿಯಲ್ಲಿ ಸರಕು ಸಾಗಣೆಗೆ ತಡೆ ಬಿದ್ದಿರುವುದರ ಹೊಡೆತವು ಭಾರತದ ರೈತರ ಮೇಲೆ ಬಿದ್ದಿದೆ. ಕೃಷಿ ಉತ್ಪನ್ನಗಳ ರಫ್ತಿನಲ್ಲಿ ಜಾಗತಿಕ ಮಟ್ಟದ ಅಗ್ರ 10 ದೇಶಗಳಲ್ಲಿ ಭಾರತವು ಒಂದಾಗಿದೆ. ಅಕ್ಕಿ, ಸಕ್ಕರೆ, ಎಣ್ಣೆಬೀಜಗಳು, ಸಂಬಾರ ಪದಾರ್ಥಗಳು, ಹಣ್ಣು ಮುಂತಾದ ವಸ್ತುಗಳನ್ನು ರಫ್ತು ಮಾಡುತ್ತಿದೆ. ಆದರೆ, ಯುದ್ಧವು ರಫ್ತು ವ್ಯವಸ್ಥೆಗೆ ಅಡ್ಡಿಯುಂಟುಮಾಡಿದೆ.

ಬಾಸ್ಮತಿ ಸೇರಿದಂತೆ ಭಾರತದಿಂದ ಅಕ್ಕಿಯು ಇರಾನ್, ಇರಾಕ್, ಯುಎಇ, ಸೌದಿ ಅರೇಬಿಯಾ, ಯೆಮನ್ ಮುಂತಾದ ರಾಷ್ಟ್ರಗಳಿಗೆ ರಫ್ತಾಗುತ್ತದೆ. ಇಸ್ರೇಲ್‌ಗೂ ಭಾರತದಿಂದ ಅಕ್ಕಿ ರಫ್ತಾಗುತ್ತದೆ. ಆದರೆ, ಯುದ್ಧದಿಂದ ಅಕ್ಕಿ ರಫ್ತಿಗೆ ಅಡಚಣೆ ಉಂಟಾಗಿದ್ದು, ಲಕ್ಷಾಂತರ ಟನ್ ದಾಸ್ತಾನು ಭಾರತದಲ್ಲಿಯೇ ಉಳಿದಿದೆ.

ಭಾರತದಿಂದ ಕೊಲ್ಲಿ ರಾಷ್ಟ್ರಗಳು ಸೇರಿದಂತೆ ಹಲವು ದೇಶಗಳಿಗೆ ರಫ್ತಾಗುತ್ತಿದ್ದ ಆಹಾರ ಧಾನ್ಯ, ಹಣ್ಣುಗಳು ಕೊಳೆಯುವಂತೆ ಆಗಿದೆ. ನಿದರ್ಶನಕ್ಕೆ ಮಹಾರಾಷ್ಟ್ರದ ರತ್ನಗಿರಿ ಮಾವು ದುಬೈ, ಕತಾರ್, ಯುಎಇಗೆ ರಫ್ತಾಗುತ್ತಿತ್ತು. ಆದರೆ, ಹೊರ್ಮುಜ್ ಅನ್ನು ನಿರ್ಬಂಧಿಸಿರುವುದರಿಂದ ಅಲ್ಲಿನ ವ್ಯಾಪಾರಿಗಳು ಮಾವು ವ್ಯಾಪಾರಕ್ಕೆ ಮುಂದಾಗಿಲ್ಲ. ಏಪ್ರಿಲ್–ಮೇ ಗರಿಷ್ಠ ಪ್ರಮಾಣದಲ್ಲಿ ಮಾವು ದೊರೆಯುವ ತಿಂಗಳುಗಳಾಗಿದ್ದು, ಹೆಚ್ಚು ದಿನ ದಾಸ್ತಾನು ಮಾಡುವ ಸೌಲಭ್ಯಗಳಿಲ್ಲದೇ ರೈತರು ಕಷ್ಟ ಅನುಭವಿಸುವಂತಾಗಿದೆ. ಇದರಿಂದ ಬೆಳೆಗಾರರು, ಮಾರಾಟಗಾರರು ಭಾರಿ ನಷ್ಟಕ್ಕೆ ಗುರಿಯಾಗಿದ್ದಾರೆ.

ಕೋಲ್ಕತ್ತಾದ ಚಹಾ ಪುಡಿ ರಫ್ತಿನದ್ದೂ ಇದೇ ಸ್ಥಿತಿ. ಭಾರತದ ಚಹಾ ಪುಡಿ ರಫ್ತು 2025ರಲ್ಲಿ ದಾಖಲೆ ಮಟ್ಟ ಮುಟ್ಟಿತ್ತು (28 ಕೋಟಿ ಕೆ.ಜಿ). ಈ ಪೈಕಿ 11.45 ಕೋಟಿ ಕೆ.ಜಿ ಇರಾನ್, ಇರಾಕ್ ಮತ್ತು ಯುಎಇ ಒಳಗೊಂಡ ಗಲ್ಫ್ ಕಾರಿಡಾರ್ ಮೂಲಕ ರಫ್ತಾಗಿದೆ. ಆದರೆ, ಈ ಬಾರಿ ಯುದ್ಧದ ಕಾರಣಕ್ಕೆ ಪಶ್ಚಿಮ ಬಂಗಾಳದ ಚಹಾ ಪುಡಿ ಕೇಳುವವರಿಲ್ಲದಂತಾಗಿದೆ. ಏಪ್ರಿಲ್‌ನಿಂದ ಡಿಸೆಂಬರ್‌ವರೆಗೆ ಹೆಚ್ಚು ಟೀ ಉತ್ಪಾದನೆಯಾಗುತ್ತದೆ. ಆದರೆ, ದಾಸ್ತಾನು ಕೇಂದ್ರಗಳು ಈಗಾಗಲೇ ತುಂಬಿಹೋಗಿದ್ದು, ರೈತರಿಗೆ ದಿಕ್ಕು ತೋಚದಂತಾಗಿದೆ.

ಆಧಾರ: ಪಿಟಿಐ, ಡೌನ್ ಟು ಅರ್ಥ್, ಅಬ್ಸರ್ವರ್ ರಿಸರ್ಚ್ ಫೌಂಡೇಷನ್, ಮಾಧ್ಯಮ ವರದಿಗಳು

# ಸ್ಪೇಸ್‌ಎಕ್ಸ್‌ನಿಂದ 'ದೃಷ್ಟಿ' ಉಪಗ್ರಹ ಉಡ್ಡಯನ



ನವದೆಹಲಿ (ಪಿಟಿಐ): ಬೆಂಗಳೂರು ಮೂಲದ ಬಾಹ್ಯಾಕಾಶ ನವೋದ್ಯಮ ಗೆಲಾಕ್ಸ್‌ಐ ವಿನ್ಯಾಸಗೊಳಿಸಿ, ಅಭಿವೃದ್ಧಿ ಪಡಿಸಿರುವ 'ಮಿಷನ್ ದೃಷ್ಟಿ' ಉಪಗ್ರಹವನ್ನು ಸ್ಪೇಸ್‌ಎಕ್ಸ್ ಸಂಸ್ಥೆಯು ರಾಕೆಟ್ ಭಾನುವಾರ ಉಡ್ಡಯನ ಮಾಡಿತು.

'ದೃಷ್ಟಿ'ಯನ್ನು ಹೊತ್ತ ರಾಕೆಟ್ 'ಫಾಲ್ಕನ್-9' ಕ್ಯಾಲಿಫೋರ್ನಿಯಾದ ಉಡ್ಡಯನ ನೆಲೆಯಿಂದ ನಭಕ್ಕೆ ಚಿಮ್ಮಿ, ಉಪಗ್ರಹವನ್ನು ಭೂ ಕಕ್ಷೆಗೆ ಯಶಸ್ವಿಯಾಗಿ ಸೇರಿಸಿತು' ಎಂದು ಗೆಲಾಕ್ಸ್‌ಐ ಸಂಸ್ಥಾಪಕ ಹಾಗೂ ಸಿಇಒ ಸುಯಶ್ ಸಿಂಗ್ ತಿಳಿಸಿದ್ದಾರೆ.

'ಕಕ್ಷೆಗೆ ಸೇರಿರುವ ಉಪಗ್ರಹ ತನ್ನ ಕಾರ್ಯಾಚರಣೆ ಆರಂಭಿಸುವಂತೆ ಮಾಡುವುದು ನಮ್ಮ ತಕ್ಷಣದ ಆದ್ಯತೆಯಾಗಿದೆ' ಎಂದು ಅವರು ಹೇಳಿದ್ದಾರೆ. 'ಮಿಷನ್ ದೃಷ್ಟಿ' ಅಡಿ 2030ರ ವೇಳೆಗೆ 10 ಉಪಗ್ರಹಗಳನ್ನು ಭೂಕಕ್ಷೆಗೆ ಸೇರಿಸುವ ಗುರಿಯನ್ನು ಗೆಲಾಕ್ಸ್‌ಐ ಹೊಂದಿದೆ.

## ವೈಶಿಷ್ಟ್ಯಗಳು

- ಮಿಷನ್ ದೃಷ್ಟಿ ವಿಶ್ವದ ಮೊದಲ ಆಪ್ಟೊಎಸ್‌ಎಆರ್ ಉಪಗ್ರಹವಾಗಿದೆ. ಎಲೆಕ್ಟ್ರೊ-ಆಪ್ಟಿಕಲ್ (ಇಒ) ಹಾಗೂ ಸಿಂಥೆಟಿಕ್ ಅಪರ್ಚರ್ ರೇಡಾರ್ (ಎಸ್‌ಎಆರ್) ಸಂವೇದಕಗಳನ್ನು ಒಂದೇ ಕಾರ್ಯಾಚರಣೆ ವೇದಿಕೆಯಲ್ಲಿ ಅಳವಡಿಸಿರುವ ಉಪಗ್ರಹ ಇದಾಗಿದೆ
- ಇಒ ಸಂವೇದಕಗಳಿಂದ ಪ್ರಖರ ಬಿಸಿಲು ಇದ್ದಾಗಲೂ ಅತ್ಯಂತ ನಿಚ್ಚಳ ಚಿತ್ರಗಳನ್ನು ಸೆರೆ ಹಿಡಿಯಲು ಸಾಧ್ಯವಾಗಲಿದೆ
- ಎಸ್‌ಎಆರ್ ಸಂವೇದಕಗಳು ಎಲ್ಲ ಋತುಮಾನಗಳಲ್ಲಿ ಹಾಗೂ ಎಲ್ಲ ಸಮಯದಲ್ಲಿ ಭೂಮಿಯ ಚಿತ್ರಗಳನ್ನು ಸೆರೆ ಹಿಡಿಯಲು ನೆರವಾಗಲಿವೆ
- ಭೂಮೇಲ್ಮೈ ಚಿತ್ರಗಳನ್ನು ಸೆರೆಹಿಡಿಯುವುದಕ್ಕೆ ಸಂಬಂಧಿಸಿ ಸಾಂಪ್ರದಾಯಿಕ ಸಾಧನಗಳು ಕೆಲ ಮಿತಿಗಳನ್ನು ಹೊಂದಿವೆ. ಈ ಕೊರತೆಗಳನ್ನು 'ದೃಷ್ಟಿ' ಉಪಗ್ರಹ ನಿವಾರಿಸಲಿದೆ
- ಭೂ ವೀಕ್ಷಣಾ ಉಪಗ್ರಹವಾಗಿಯೂ ಕಾರ್ಯನಿರ್ವಹಿಸುವುದರಿಂದ ರಕ್ಷಣಾ ಕ್ಷೇತ್ರ, ಕೃಷಿ, ವಿಪತ್ತು ನಿರ್ವಹಣೆ, ಸಾಗರಯಾನದ ಮೇಲೆ ಕಣ್ಗಾವಲು ಹಾಗೂ ಮೂಲಸೌಕರ್ಯಗಳ ಅಭಿವೃದ್ಧಿಗೆ ಯೋಜನೆ ರೂಪಿಸುವಲ್ಲಿ ಈ ಉಪಗ್ರಹ ನಿರ್ಣಾಯಕ ಪಾತ್ರ ವಹಿಸಲಿದೆ

# ಉತ್ಪಾದನಾ ಕೋಟಾ ಹೆಚ್ಚಿಸಿದ 'ಒಪೆಕ್+'




ವಿಯೆನ್ನಾ (ಎಎಫ್‌ಪಿ): ಸೌದಿ ಅರೇಬಿಯಾ, ರಷ್ಯಾ ಮತ್ತು 'ಒಪೆಕ್ +' ಸಂಘಟನೆಯ ಇತರ ಐದು ದೇಶಗಳು ಭಾನುವಾರ ತಮ್ಮ ಕಚ್ಚಾ ತೈಲ ಉತ್ಪಾದನೆ ಕೋಟಾವನ್ನು ಜಾಸ್ತಿ ಮಾಡಿವೆ.

ಯುಎಇ ದೇಶವು ಸಂಘಟನೆಯಿಂದ ದಿಢೀರ್ ಹೊರನಡೆದ ನಂತರ ಸಂಘಟನೆಯಲ್ಲಿ ನಿರಂತರತೆಯನ್ನು ಖಾತರಿಪಡಿಸುವ ಉದ್ದೇಶದಿಂದ ಅವು ಹೀಗೆ ಮಾಡಿವೆ ಎನ್ನಲಾಗಿದೆ.

ಕಚ್ಚಾ ತೈಲವನ್ನು ಉತ್ಪಾದಿಸುವ ಏಳು ಪ್ರಮುಖ ದೇಶಗಳು ಜೂನ್‌ನಲ್ಲಿ ಪ್ರತಿದಿನದ ಉತ್ಪಾದನೆಯನ್ನು 1.88 ಲಕ್ಷ ಬ್ಯಾರಲ್‌ನಷ್ಟು ಹೆಚ್ಚು ಮಾಡಲಿವೆ. ಕಚ್ಚಾ ತೈಲದ ಮಾರುಕಟ್ಟೆಯಲ್ಲಿ ಸ್ಥಿರತೆಯನ್ನು ತರುವ ಉದ್ದೇಶದಿಂದ ಹೀಗೆ ಮಾಡಲಾಗುತ್ತದೆ ಎಂದು 'ಒಪೆಕ್ +'ನ ಪ್ರಕಟಣೆ ತಿಳಿಸಿದೆ. ಆದರೆ ಹೇಳಿಕೆಯಲ್ಲಿ ಯುಎಇ ಬಗ್ಗೆ ಯಾವುದೇ ಉಲ್ಲೇಖ ಇಲ್ಲ.

ಯುಎಇ ಬಗ್ಗೆ ಯಾವುದೇ ಉಲ್ಲೇಖ ಇಲ್ಲದಿರುವುದು ಸಂಬಂಧಗಳು ಬಿಗುವಿನಿಂದ ಕೂಡಿರುವುದರ ಸೂಚನೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

IAS/KAS Academy

# ನೇರ ತೆರಿಗೆ ಸಂಗ್ರಹ ಗುರಿಗಿಂತ ಕಡಿಮೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ನೇರ ತೆರಿಗೆಗಳ ಸಂಗ್ರಹವು 2025-26ರಲ್ಲಿ ಶೇ 5.12ರಷ್ಟು ಹೆಚ್ಚಳ ಕಂಡಿದ್ದು ₹23.40 ಲಕ್ಷ ಕೋಟಿಗೆ ತಲುಪಿದೆ. ಆದರೆ ಇದು ಮಾರ್ಚ್ 31ಕ್ಕೆ ಕೊನೆಗೊಂಡ ಹಣಕಾಸಿನ ವರ್ಷಕ್ಕೆ ಪರಿಷ್ಕೃತ ಬಜೆಟ್ ಅಂದಾಜಿನಲ್ಲಿ ನಿಗದಿ ಮಾಡಿದ್ದ ಗುರಿಗಿಂತ ಕಡಿಮೆ.

2025-26ರ ಪರಿಷ್ಕೃತ ಅಂದಾಜಿನಲ್ಲಿ ಕೇಂದ್ರ ಸರ್ಕಾರವು ನೇರ ತೆರಿಗೆ ಸಂಗ್ರಹವು ₹24.21 ಲಕ್ಷ ಕೋಟಿ ಆಗುವ ಗುರಿ ಹಾಕಿಕೊಂಡಿತ್ತು. ಕೇಂದ್ರ ನೇರ ತೆರಿಗೆಗಳ ಮಂಡಳಿ (ಸಿಬಿಡಿಟಿ) ಬಿಡುಗಡೆ ಮಾಡಿರುವ ಅಂಕಿ-ಅಂಶಗಳ ಪ್ರಕಾರ 2025-26ರಲ್ಲಿ ₹10.99 ಲಕ್ಷ ಕೋಟಿ ಕಾರ್ಪೊರೇಟ್ ತೆರಿಗೆ ಸಂಗ್ರಹ ಆಗಿದೆ, ಎಸ್‌ಟಿಟಿ ಸೇರಿ ವೈಯಕ್ತಿಕ ಆದಾಯ ತೆರಿಗೆ ಸಂಗ್ರಹವು ₹12.41 ಲಕ್ಷ ಕೋಟಿ ಆಗಿದೆ.

# 'ಲಿಪುಲೇಖ್ ಪಾಸ್' ನಮ್ಮದೇ– ನೇಪಾಳ

ಕಠ್ಮಂಡು (ಪಿಟಿಐ): 'ಲಿಪುಲೇಖ್ ಪಾಸ್' ಮೇಲಿನ ತನ್ನ ಪ್ರಾದೇಶಿಕ ಹಕ್ಕು ಪ್ರತಿಪಾದಿಸಿರುವ ನೇಪಾಳವು ಈ ವಿಚಾರದಲ್ಲಿ ಭಾರತದೊಂದಿಗೆ ಮಾತುಕತೆ ನಡೆಸಲು ನಿರ್ಧರಿಸಿದೆ.

ಮುಂಬರುವ ಕೈಲಾಸ ಮಾನಸ ಸರೋವರ ಯಾತ್ರೆಯನ್ನು ಭಾರತ 'ಲಿಪುಲೇಖ್ ಪಾಸ್' ಮೂಲಕ ನಡೆಸಲು ಯೋಜಿಸುತ್ತಿರುವುದಕ್ಕೆ ನೇಪಾಳ ಭಾನುವಾರ ಆಕ್ಷೇಪ ವ್ಯಕ್ತಪಡಿಸಿತ್ತು. ಈ ಆಕ್ಷೇಪಣೆಯನ್ನು ತಳ್ಳಿಹಾಕಿದ್ದ ಭಾರತ, ಉತ್ತಾರಾಖಂಡದ ಲಿಪುಲೇಖ್ ಪಾಸ್ ಮೂಲಕ ದಶಕಗಳಷ್ಟು (1954) ಹಿಂದಿನಿಂದಲೂ ಕೈಲಾಸ ಮಾನಸ ಸರೋವರ ಯಾತ್ರೆ ನಡೆದುಕೊಂಡು ಬಂದಿದೆ. ಇದು ಅತ್ಯಂತ ಹಳೆಯ ಮಾರ್ಗ ಎಂದು ಕಟುವಾಗಿ ಪ್ರತಿಕ್ರಿಯೆ ನೀಡಿತ್ತು. 'ನೇಪಾಳವು ತನ್ನ ಗಡಿಯನ್ನು ವಿಸ್ತರಿಸುವ ಉದ್ದೇಶ ಹೊಂದಿಲ್ಲ. 'ಲಿಪುಲೇಖ್ ಪಾಸ್' ನೇಪಾಳಕ್ಕೆ ಸೇರಿದ್ದಾಗಿದ್ದು, ನಮ್ಮ ನಿಲುವಿಗೆ ಬದ್ಧವಾಗಿದ್ದೇವೆ' ಎಂದು ಸರ್ಕಾರದ ವಕ್ತಾರ, ಶಿಕ್ಷಣ, ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವ ಸಸ್ಮಿತ್ ಪೊಖಾರೆಲ್ ತಿಳಿಸಿದ್ದಾರೆ.

'ಎರಡು ದೇಶಗಳ ನಡುವಿನ ಸಹಯೋಗ ಹಾಗೂ ರಾಜತಾಂತ್ರಿಕ ಮಾತುಕತೆಯ ಮೂಲಕ ಸಮಸ್ಯೆಯನ್ನು ಬಗೆಹರಿಸಲಾಗುವುದು' ಎಂದು ತಿಳಿಸಿದ್ದಾರೆ.

# ನಿಟ್ಟೂರು: ಬಂಡೆಗಲ್ಲು ಶಾಸನ ಪತ್ತೆ

ಪ್ರಜಾವಾಣಿ ವಾರ್ತೆ

ತೆಕ್ಕಲಕೋಟೆ (ಬಳ್ಳಾರಿ ಜಿಲ್ಲೆ): ನಿಟ್ಟೂರು ಗ್ರಾಮದ ಸುಕ್ರದಪ್ಪನ ಬೆಟ್ಟದ ಬಳಿ ಹೊಲದಲ್ಲಿ ಬಂಡೆಗಲ್ಲು ಶಾಸನ ಪತ್ತೆಯಾಗಿದೆ.

ನಿಟ್ಟೂರಿನಲ್ಲಿರುವ ಅಶೋಕನ ಶಿಲಾಶಾಸನ ಪತ್ತೆಯಾಗಿರುವ ಸ್ಥಳದಿಂದ ಸುಮಾರು ಒಂದು ಕಿ.ಮೀ ದೂರದಲ್ಲಿರುವ ಈ ಬಂಡೆಗಲ್ಲು ಶಾಸನವನ್ನು ಸಂಶೋಧನಾರ್ಥಿಗಳಾದ ಅಶೋಕ್ ಅಬಕಾರಿ, ಮನೋಹರ ಸಿ.ಎಂ ಗುರುತಿಸಿ, ಕ್ಷೇತ್ರ ಅಧ್ಯಯನಕ್ಕೆ ಧಾರವಾಡದ ಲಿಪಿತಜ್ಞ ಮಾರುತಿ ಭಜಂತ್ರಿ ಹಾಗೂ ಹಿರೇಬೆಣಕಲ್ ಮಂಜುನಾಥ ದೊಡ್ಡಮನಿ ಅವರ ಗಮನಕ್ಕೆ ತಂದರು.

ಶಾಸನವು ಬಂಡೆಯೊಂದರ ಮೇಲೆ ಪ್ರಾಚೀನ ಲಿಪಿಯಲ್ಲಿ ಬರೆಯಲ್ಪಟ್ಟಿದ್ದು, ಏಳು ಸಾಲುಗಳಿವೆ. ಮೌರ್ಯರ ಆಳ್ವಿಕೆಯನ್ನು ಒಳಗೊಂಡಿರುವ ಪ್ರದೇಶವೆಂದು ಗುರುತಿಸಲಾಗಿತ್ತು. ಸದ್ಯ ಪತ್ತೆಯಾದ ಶಾಸನದ ಲಿಪಿಯ ಆಧಾರದ ಮೇಲೆ ಇದು ಏಳನೇ ಶತಮಾನ ಬಾದಾಮಿ ಚಾಲುಕ್ಯರ ಕಾಲದಿಂದ ರಾಷ್ಟ್ರಕೂಟರ ಕಾಲಘಟ್ಟಕ್ಕೆ ಸೇರಿದ್ದು ಎಂದು ಅಂದಾಜಿಸಲಾಗಿದೆ.

'ಇತಿಹಾಸ ಸಂಶೋಧಕ ಗಂಗಾವತಿಯ ಶರಣಬಸಪ್ಪ ಕೋಲ್ಕಾರ ಮಾರ್ಗದರ್ಶನದಲ್ಲಿ ಶಾಸನದ ಅಧ್ಯಯನ ನಡೆಸುತ್ತಿದ್ದು, ಶಾಸನದ ಕುರಿತು ಶೀಘ್ರವೇ ಮಾಹಿತಿ ಒದಗಿಸಲಾಗುವುದು' ಎಂದು ಲಿಪಿತಜ್ಞ ಮಾರುತಿ ಭಜಂತ್ರಿ ತಿಳಿಸಿದ್ದಾರೆ.



ಹೊಲದಲ್ಲಿ ಪತ್ತೆಯಾಗಿರುವ ಬಂಡೆಗಲ್ಲು ಶಾಸನ



Dr Rajkumar IAS/KAS Academy

# ಕಬ್ಬಿನ ಎಫ್‌ಆರ್‌ಪಿ ಹೆಚ್ಚಳ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಕ್ಟೋಬರ್‌ನಲ್ಲಿ ಪ್ರಾರಂಭವಾಗುವ 2026-27ರ ಹಂಗಾಮಿನಲ್ಲಿ ಕಬ್ಬು ಬೆಳೆಗಾರರಿಗೆ ಕಾರ್ಖಾನೆಗಳು ಪಾವತಿಸಬೇಕಾದ ಕನಿಷ್ಠ ಬೆಲೆಯನ್ನು ಕ್ವಿಂಟಲ್‌ಗೆ ₹365ಕ್ಕೆ ಹೆಚ್ಚಿಸಲು ಕೇಂದ್ರ ಸರ್ಕಾರ ಮಂಗಳವಾರ ನಿರ್ಧರಿಸಿದೆ.

ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಕಬ್ಬಿನ ನ್ಯಾಯಸಮ್ಮತ ಮತ್ತು ಲಾಭದಾಯಕ ದರದ (ಎಫ್‌ಆರ್‌ಪಿ) ಕುರಿತು ನಿರ್ಧಾರ ತೆಗೆದುಕೊಳ್ಳಲಾಗಿದೆ. ಕಳೆದ ವರ್ಷ



ಎಫ್‌ಆರ್‌ಪಿ ₹355 ಇತ್ತು.

'ಶೇ 10.25ರ ಮೂಲ ಇಳುವರಿ ದರ ಆಧರಿಸಿ ಎಫ್‌ಆರ್‌ಪಿಯನ್ನು ಕ್ವಿಂಟಲ್‌ಗೆ ₹365 ನಿಗದಿಪಡಿಸಲಾಗಿದೆ. ಶೇ 10.25ಕ್ಕಿಂತ ಹೆಚ್ಚಿನ ಇಳುವರಿಯಲ್ಲಿ ಪ್ರತಿ ಶೇ 0.1 ರಷ್ಟು ಹೆಚ್ಚಳಕ್ಕೆ, ಎಫ್‌ಆರ್‌ಪಿ ಕ್ವಿಂಟಾಲ್‌ಗೆ ₹3.56ರಷ್ಟು ಜಾಸ್ತಿ ಆಗುತ್ತದೆ' ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಸುದ್ದಿಗಾರರಿಗೆ ಇಲ್ಲಿ ತಿಳಿಸಿದರು.

ಎಫ್‌ಆರ್‌ಪಿ ಈಗ ಅಖಿಲ ಭಾರತ ಸರಾಸರಿ ಉತ್ಪಾದನಾ ವೆಚ್ಚದ 200.5 ಪ್ರತಿಶತದಷ್ಟಿದೆ. ಈ ಹೆಚ್ಚಳದಿಂದ 1 ಕೋಟಿ ಕಬ್ಬು ಬೆಳೆಗಾರರಿಗೆ ಅನುಕೂಲವಾಗಲಿದೆ ಎಂದು ಅವರು ಹೇಳಿದರು.

ಕೃಷಿ ವೆಚ್ಚ ಮತ್ತು ಬೆಲೆಗಳ ಆಯೋಗದ (CACP) ಶಿಫಾರಸುಗಳ ಆಧಾರದಲ್ಲಿ ಸರ್ಕಾರವು ಕಬ್ಬಿಗೆ ಎಫ್‌ಆರ್‌ಪಿ ನಿಗದಿ ಮಾಡುತ್ತದೆ. ಸಕ್ಕರೆ ಕಾರ್ಖಾನೆಗಳು ರೈತರಿಂದ ಎಫ್‌ಆರ್‌ಪಿ ಅಥವಾ ಅದಕ್ಕಿಂತ ಹೆಚ್ಚಿನ ಬೆಲೆಗೆ ಕಬ್ಬನ್ನು ಖರೀದಿಸುವುದು ಕಡ್ಡಾಯ.

# ಜೈಲಿನಲ್ಲಿ ನಲಿಯುತಾ ಕಲಿಕೆಗೆ ಅವಕಾಶ

• ಆದಿತ್ಯ ಕೆ.ಎ.

ಬೆಂಗಳೂರು/ಆನೇಕಲ್: ಅಪರಾಧ ಕೃತ್ಯಗಳಲ್ಲಿ ಭಾಗಿಯಾದ ತಾಯಂದಿರ ಜತೆಗೆ ಅನಿವಾರ್ಯ ಪರಿಸ್ಥಿತಿಯಲ್ಲಿ ಜೈಲು ಸೇರಿ ನಾಲ್ಕು ಗೋಡೆಗಳ ಮಧ್ಯೆ ಬೆಳೆಯಬೇಕಾದ ಹಾಗೂ ಶಿಕ್ಷಣದಿಂದ ವಂಚಿತರಾಗುತ್ತಿದ್ದ ಮಕ್ಕಳಿಗೆ ಉತ್ತಮ ಭವಿಷ್ಯ ರೂಪಿಸುವ ಉದ್ದೇಶದಿಂದ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ದಲ್ಲಿಯೇ 'ಶಿಶು ಪಾಲನಾ ಕೇಂದ್ರ' ಸ್ಥಾಪಿಸಲಾಗಿದೆ.

ಕರ್ನಾಟಕ ಮಕ್ಕಳ ರಕ್ಷಣಾ ನಿರ್ದೇಶನಾಲಯ (ಡಿಸಿಪಿ) ಹಾಗೂ ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆ ಸಹಯೋಗದಲ್ಲಿ ಈ ಕೇಂದ್ರ ಸ್ಥಾಪಿಸಲಾಗಿದೆ. ವಿದೇಶಿ ಆರೋಪಿಗಳ ಮಕ್ಕಳೂ ಸೇರಿದಂತೆ ಒಂಬತ್ತು ಮಕ್ಕಳು ನಲಿಯುತ್ತಾ ಕಲಿಯುತ್ತಿದ್ದಾರೆ.

ಕಾರಾಗೃಹದೊಳಗೆ ಡ್ರಗ್ಸ್ ಪೂರೈಕೆ, ವಿಐಪಿ ಕೈದಿಗಳಿಗೆ ವಿಶೇಷ ಆತಿಥ್ಯ, ಮೊಬೈಲ್ ಫೋನ್‌ಗಳನ್ನು ಕದ್ದುಮುಚ್ಚಿ ಸಾಗಣೆ, ಸಜಾ ಬಂದಿಗಳು ಹಾಗೂ ವಿಚಾರಣಾಧೀನ ಕೈದಿಗಳು ನಡುವೆ ಗಲಾಟೆ, ಜೈಲಿನ ಒಳಗಿನಿಂದಲೇ ಬೆದರಿಕೆ, ಜೈಲಿನ ಸಿಬ್ಬಂದಿಗೆ ನಿಂದನೆಯಂತಹ ಪ್ರಕರಣ ಗಳಿಗೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಸದಾ ಸುದ್ದಿ ಆಗುತ್ತಿತ್ತು. ಇದೀಗ ದೇಶದಲ್ಲಿಯೇ ಮೊದಲ ಬಾರಿಗೆ ಪರಪ್ಪನ ಅಗ್ರಹಾರ ಜೈಲಿನಲ್ಲಿ 'ಶಿಶು ಪಾಲನಾ ಕೇಂದ್ರ' ಆರಂಭಿಸುವ ಮೂಲಕ ಹೊಸ ಪ್ರಯತ್ನಕ್ಕೆ ಮುನ್ನುಡಿ ಬರೆಯಲಾಗಿದೆ.

▸4

## ಮಕ್ಕಳ ದತ್ತು, ಶಿಕ್ಷಣಕ್ಕೆ ನೆರವು

ತಾಯಂದಿರು ಹೆಚ್ಚು ಅವಧಿಯ ಶಿಕ್ಷೆಗೆ ಒಳಗಾದರೆ ಅಂತಹವರ ಮಕ್ಕಳ ಕುಟುಂಬಸ್ಥರನ್ನು ಸಂಪರ್ಕಿಸಲಾಗುತ್ತದೆ. ಕುಟುಂಬದವರು ಜವಾಬ್ದಾರಿ ವಹಿಸಿಕೊಳ್ಳದಿದ್ದರೆ ಸ್ವಯಂ ಸೇವಾ ಸಂಸ್ಥೆಗಳ ನೆರವು ಪಡೆದು ಮುಂದಿನ ಶಿಕ್ಷಣವನ್ನು ಕೊಡಿಸ ಲಾಗುತ್ತಿದೆ. ಜತೆಗೆ, ಮಕ್ಕಳನ್ನು ದತ್ತು ತೆಗೆದುಕೊಳ್ಳಲು ಆಸಕ್ತಿ ಇದ್ದವರನ್ನು ಸಂಪರ್ಕಿಸಿ ದತ್ತು ತೆಗೆದುಕೊಳ್ಳುವಂತೆ ಪ್ರೋತ್ಸಾಹಿಸಲಾಗುತ್ತಿದೆ. ಕೇಂದ್ರ ಸರ್ಕಾರದ ಯೋಜನೆ ಅಡಿ ಮಕ್ಕಳಿಗೆ ಆರ್ಥಿಕ ನೆರವು ಸಹ ಒದಗಿಸಲಾಗುತ್ತಿದೆ ಎಂದು ಅಧಿಕಾರಿಯೊಬ್ಬರು ಹೇಳಿದರು.



ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನಿರ್ಮಿಸಲಾಗಿರುವ ಶಿಶು ಪಾಲನಾ ಕೇಂದ್ರ



ಕಾರಾಗೃಹದ ವಾತಾವರಣವು ಮಕ್ಕಳ ಮನಸ್ಸಿನ ಮೇಲೆ ನಕಾರಾತ್ಮಕ ಪ್ರಭಾವ ಬೀರಬಾರದು ಎಂಬ ಉದ್ದೇಶದಿಂದ ಈ ಕೇಂದ್ರ ಆರಂಭಿಸಲಾಗಿದೆ

**ಸ್ನೇಹಾ, ನಿರ್ದೇಶಕಿ,** ಕರ್ನಾಟಕ ಮಕ್ಕಳ ರಕ್ಷಣಾ ನಿರ್ದೇಶನಾಲಯ

### ರಾಜ್ಯದಲ್ಲಿ ಶೇ 22.61ರಷ್ಟು ಏರಿಕೆ: ಎನ್‌ಸಿಆರ್‌ಬಿ ವರದಿ

# ಅನ್ನದಾತರ ಆತ್ಮಹತ್ಯೆ ಹೆಚ್ಚಳ


ಪ್ರಜಾವಾಣಿ ವಾರ್ತೆ

**ಅಂಕಿ ಅಂಶಗಳು**

| 10,546 | 4,633 | 5,913 | 6.2% |
|---|---|---|---|
| ದೇಶದಲ್ಲಿ 2024ರಲ್ಲಿ ಕೃಷಿ ಕ್ಷೇತ್ರದಲ್ಲಿ ತೊಡಗಿದವರ ಆತ್ಮಹತ್ಯೆ | ರೈತರ ಆತ್ಮಹತ್ಯೆ | ಕೃಷಿ ಕಾರ್ಮಿಕರ ಆತ್ಮಹತ್ಯೆ | ದೇಶದ ಒಟ್ಟಾರೆ ಆತ್ಮಹತ್ಯೆಗಳ ಸಂಖ್ಯೆಯಲ್ಲಿ ಕೃಷಿ ಕ್ಷೇತ್ರದ ಪಾಲು |

ನವದೆಹಲಿ: ದೇಶದಲ್ಲಿ 2024ರಲ್ಲಿ ರೈತರು ಹಾಗೂ ಕೃಷಿ ಕಾರ್ಮಿಕರ ಆತ್ಮಹತ್ಯೆಗಳು ಸ್ವಲ್ಪ ಕಡಿಮೆಯಾಗಿವೆ. ಆದರೆ, ಕರ್ನಾಟಕದಲ್ಲಿ ಆತ್ಮಹತ್ಯೆ ಪ್ರಮಾಣ ಶೇ 22.61ರಷ್ಟು ಹೆಚ್ಚಳ ಆಗಿದೆ ಎಂದು 'ಭಾರತದಲ್ಲಿ ಅಪಘಾತದ ಸಾವುಗಳು ಹಾಗೂ ಆತ್ಮಹತ್ಯೆಗಳು-2024' ವರದಿ ತಿಳಿಸಿದೆ.

ಬುಧವಾರ ಪ್ರಕಟವಾದ ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋದ (ಎನ್‌ಸಿಆರ್‌ಬಿ) ವರದಿ ಪ್ರಕಾರ, ದೇಶದಲ್ಲಿ ಕೃಷಿ ಕ್ಷೇತ್ರದಲ್ಲಿ ತೊಡಗಿರುವ 10,546 ಮಂದಿ 2024ರಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 2023ರಲ್ಲಿ ಈ ಸಂಖ್ಯೆ 10,786 ಆಗಿತ್ತು. ದೇಶದಲ್ಲಿ ಆತ್ಮಹತ್ಯೆ ಪ್ರಮಾಣ ಶೇ 2.22ರಷ್ಟು ಕಡಿಮೆ ಆಗಿದೆ. ಆದರೆ, ಕರ್ನಾಟಕದಲ್ಲಿ ಈ ಸಂಖ್ಯೆ 2,423ರಿಂದ 2,971ಕ್ಕೆ ಏರಿಕೆ ಆಗಿದೆ.



ರೈತರ ಆತ್ಮಹತ್ಯೆಯಲ್ಲಿ ಮಹಾರಾಷ್ಟ್ರ ಮೊದಲ ಸ್ಥಾನದಲ್ಲಿದ್ದರೆ, ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಅನ್ನದಾತರ ಆತ್ಮಹತ್ಯೆಯಲ್ಲಿ ಮೊದಲ ಐದು ಸ್ಥಾನದಲ್ಲಿರುವ ರಾಜ್ಯಗಳ ಪೈಕಿ, ಕರ್ನಾಟಕ ಹಾಗೂ ಮಹಾರಾಷ್ಟ್ರ ದಲ್ಲಿ 2024ರಲ್ಲಿ ಈ ಸಂಖ್ಯೆ ಜಾಸ್ತಿ ಆಗಿದೆ. ರಾಜ್ಯದಲ್ಲಿ 2023ರಲ್ಲಿ 1,425 ಕೃಷಿಕರು ಆತ್ಮಹತ್ಯೆ ಮಾಡಿಕೊಂಡಿದ್ದರು. 2024ರಲ್ಲಿ 1,770 ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. 1,201 ಕೃಷಿ ಕಾರ್ಮಿಕರು ಜೀವ ಕಳೆದುಕೊಂಡಿದ್ದಾರೆ.

ಮಹಾರಾಷ್ಟ್ರ, ಆಂಧ್ರ ಪ್ರದೇಶ ಹಾಗೂ ತಮಿಳುನಾಡಿನಲ್ಲಿ ಆತ್ಮಹತ್ಯೆ ಪ್ರಮಾಣ ಅಲ್ಪ ಇಳಿಕೆ ಆಗಿದ್ದರೆ, ಛತ್ತೀಸಗಢ, ಗುಜರಾತ್, ರಾಜಸ್ಥಾನ ಹಾಗೂ ಪುದುಚೆರಿಯಲ್ಲಿ ಸ್ವಲ್ಪ ಏರಿಕೆ ಆಗಿದೆ. ರೈತರ ಆತ್ಮಹತ್ಯೆಗೆ ಕಾರಣಗಳನ್ನು ವರದಿಯಲ್ಲಿ ಉಲ್ಲೇಖಿಸಿಲ್ಲ.

ಆತ್ಮಹತ್ಯೆ ಮಾಡಿಕೊಂಡ 4,633 ರೈತರಲ್ಲಿ 4,134 ಜನರು ತಮ್ಮ ಸ್ವಂತ ಭೂಮಿಯಲ್ಲಿ ಕೃಷಿ ಮಾಡುತ್ತಿದ್ದರೆ, 499 ಜನರು ಗುತ್ತಿಗೆಗೆ ಭೂಮಿಯನ್ನು ಪಡೆದಿದ್ದಾರೆ ಎಂದು ವರದಿ ತಿಳಿಸಿದೆ.

**ರೈತರು, ಕೃಷಿ ಕಾರ್ಮಿಕರ ಆತ್ಮಹತ್ಯೆ**

| ರಾಜ್ಯ | 2023 | 2024 |
|---|---|---|
| ಮಹಾರಾಷ್ಟ್ರ | 4,151 | 3,824 |
| ಕರ್ನಾಟಕ | 2,423 | 2,971 |
| ಮಧ್ಯಪ್ರದೇಶ | 777 | 835 |
| ಆಂಧ್ರ ಪ್ರದೇಶ | 925 | 780 |
| ತಮಿಳುನಾಡು | 631 | 503 |
| ಛತ್ತೀಸಗಢ | 468 | 486 |
| ರಾಜಸ್ಥಾನ | 252 | 285 |
| ಉತ್ತರ ಪ್ರದೇಶ | 357 | 221 |
| ಗುಜರಾತ್ | 141 | 143 |
| ಕೇರಳ | 132 | 134 |

# ಹೊಯ್ಸಳ ಶೈಲಿಯ ಪ್ರಾಚ್ಯ ಅವಶೇಷ ಪತ್ತೆ

ಗದಗ: ತಾಲ್ಲೂಕಿನ ಲಕ್ಕುಂಡಿ ಗ್ರಾಮದಲ್ಲಿ ನಡೆದಿರುವ ಪ್ರಾಚ್ಯ ಅವಶೇಷ ಅನ್ವೇಷಣೆ ಸಪ್ತಾಹದಲ್ಲಿ ಗುರುವಾರ ಇಲ್ಲಿನ ದುರ್ಗಾದೇವಿ ಕೆರೆಯಲ್ಲಿ ಹೊಯ್ಸಳ ಶೈಲಿಯ ಎರಡು ಪ್ರಾಚ್ಯ ಅವಶೇಷಗಳು ಸಿಕ್ಕಿವೆ.

ಕಲಾತ್ಮಕತೆಯಿಂದ ಕೂಡಿದ ಈ ಪ್ರಾಚ್ಯ ಅವಶೇಷದಲ್ಲಿ ವಾದ್ಯ ನುಡಿಸುತ್ತಿರುವ ಪುರುಷ ಮತ್ತು ನೃತ್ಯನಿರತ ಭಂಗಿಯಲ್ಲಿರುವ ಸ್ತ್ರೀ ಶಿಲ್ಪಗಳಿವೆ. ಒಂದು ಶಿಲ್ಪದಲ್ಲಿ ಪುರುಷ ಮದ್ದಳೆಯನ್ನು ಬಾರಿಸುತ್ತಿದ್ದು, ಅದಕ್ಕೆ ಸ್ತ್ರೀ ನೃತ್ಯ ಮಾಡುತ್ತಿದ್ದಾಳೆ. ಮತ್ತೊಂದರಲ್ಲಿ ಪುರುಷ ವೇಣುವಾದನದಲ್ಲಿ ತಲ್ಲೀನನಾಗಿದ್ದರೆ, ಮಹಿಳೆಯು ನೃತ್ಯ ಮಾಡುತ್ತಿದ್ದಾಳೆ.

'ಈ ಪ್ರಾಚ್ಯ ಅವಶೇಷಗಳ ಕೆತ್ತನೆ ಗಮನಿಸಿದರೆ, ಹೊಯ್ಸಳರ ಶೈಲಿಯ ಪ್ರಭಾವ ಇರುವುದನ್ನು ಕಾಣಬಹುದು' ಎಂದು ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ರಾಜ್ಯ ಸಮಿತಿ ಸದಸ್ಯ ಸಿದ್ದು ಪಾಟೀಲ ತಿಳಿಸಿದ್ದಾರೆ.



ಹೊಯ್ಸಳ ಶೈಲಿ ಕೆತ್ತನೆಯ ಪ್ರಾಚ್ಯ ಅವಶೇಷ ಪತ್ತೆಯಾಗಿದೆ

# ಕರ್ನಾಟಕಕ್ಕೆ ಕಾಲಿಟ್ಟ ಅಮೆರಿಕ 'ಚಿಪ್' ಕಂಪನಿ

## ₹3,600 ಕೋಟಿ ಹೂಡಿಕೆಯ ಭರವಸೆ • 140 ಎಕರೆ ಜಮೀನು ಹಂಚಿಕೆ

• ಭರತ್ ಜೋಶಿ



ಬೆಂಗಳೂರು: ಅನ್ಯ ರಾಜ್ಯಗಳತ್ತ ಮುಖ ಮಾಡಿರುವ ಸೆಮಿಕಂಡಕ್ಟರ್ ಉದ್ಯಮಗಳನ್ನು ಆಕರ್ಷಿಸುವುದಕ್ಕಾಗಿ, ಉದ್ಯಮ ಸ್ನೇಹಿ ನೀತಿಯನ್ನು ರಾಜ್ಯ ಸರ್ಕಾರ ಜಾರಿಗೊಳಿಸಿದ್ದರಿಂದಾಗಿ ಅಮೆರಿಕದ ಪ್ರಭಾವಿ ಕಂಪನಿಯೊಂದು ಕರ್ನಾಟಕಕ್ಕೆ ಕಾಲಿಡಲಿದೆ.

ಅಮೆರಿಕನ್ ಸೆಮಿಕಂಡಕ್ಟರ್ ಯೋಜನೆಯನ್ನು ಆಕರ್ಷಿಸಲು ತನ್ನ ಭೂಹಂಚಿಕೆ ನೀತಿಯನ್ನು ಸರ್ಕಾರ ಬದಲಾವಣೆ ಮಾಡಿದೆ. 'ಚಿಪ್' ತಯಾರಿಕಾ ಉದ್ಯಮವನ್ನು ವಿಸ್ತರಿಸುವುದಕ್ಕಾಗಿ ಮತ್ತು ಭವಿಷ್ಯದಲ್ಲಿ ಈ ಕ್ಷೇತ್ರದ ಮೇಲೆ ಹೂಡಿಕೆಗೆ ಇದೇ ರೀತಿಯ 'ರಿಯಾಯಿತಿ' ನೀಡಲು ಸರ್ಕಾರ ಮುನ್ನುಡಿ ಬರೆದಿದೆ.

ಕ್ಯಾಲಿಫೋರ್ನಿಯಾದ ಅಪ್ಲೈಡ್ ಮೆಟೀರಿಯಲ್ಸ್ ಕಂಪನಿಯು ಈ ಯೋಜನೆಗೆ ₹3,600 ಕೋಟಿ ಬಂಡವಾಳ ಹೂಡಿಕೆ ಮಾಡಲಿದೆ. ಇದು ವಿಶ್ವದ ಅತಿ ದೊಡ್ಡ ಸೆಮಿಕಂಡಕ್ಟರ್ ಸಾಧನಗಳ ತಯಾರಿಕಾ ಕಂಪನಿಗಳಲ್ಲಿ ಒಂದು. ಬೆಂಗಳೂರಿನಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಹಾಗೂ ಪೂರಕ ವ್ಯವಸ್ಥೆ ಅಭಿವೃದ್ಧಿ ಯೋಜನೆಯನ್ನು ಸ್ಥಾಪಿಸಲಿದೆ.

**ಮುಖ್ಯಾಂಶಗಳು**

- ವಿಶ್ವದ ಪ್ರಮುಖ ಸೆಮಿಕಂಡಕ್ಟರ್ ಕಂಪನಿಗೆ ಜಮೀನು
- ಮತ್ತಷ್ಟು ಕಂಪನಿಗಳನ್ನು ಆಕರ್ಷಿಸಲು ರಾಜ್ಯ ಸರ್ಕಾರದ ಯತ್ನ
- ಬಿಎಸ್‌ಬಿಪಿಯಲ್ಲಿ ಇನ್ನೂ 267 ಎಕರೆ ಜಮೀನು ಲಭ್ಯ

ಈ ಕಂಪನಿಗೆ ಫ್ಲೋರ್ ಸ್ಪೇಸ್ ಇಂಡೆಕ್ಸ್ (ಎಫ್‌ಎಸ್‌ಐ) ಅಡಿ ಪ್ರತಿ ಚದರಡಿಗೆ ₹1,288ರಂತೆ ಲೀಸ್ ಕಂ ಸೇಲ್ ಆಧಾರದಲ್ಲಿ ಭೂಮಿ ಹಂಚಿಕೆ ಮಾಡಲಾಗಿದೆ. ಇದು ಬೆಂಗಳೂರು ಸಿಗ್ನೇಚರ್ ಬಿಜಿನೆಸ್ ಪಾರ್ಕ್ (ಬಿಎಸ್‌ಬಿಪಿ) ಅಡಿ ನೀಡಲಾಗುವ ನೀತಿಗೆ ವ್ಯತಿರಿಕ್ತವಾಗಿದೆ ಎಂಬುದು ದಾಖಲೆಗಳಿಂದ ಗೊತ್ತಾಗಿದೆ. ಬಿಎಸ್‌ಬಿಪಿಯಲ್ಲಿ ಲೀಸ್ ಆಧಾರದಲ್ಲಿ ಮಾತ್ರ ಜಮೀನು ಹಂಚಿಕೆ ಮಾಡಬಹುದಾಗಿತ್ತು.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಇರುವ ಬಿಎಸ್‌ಬಿಪಿಯಲ್ಲಿ ಕ್ಯಾಲಿಫೋರ್ನಿಯಾ ಅಪ್ಲೈಡ್ ಮೆಟೀರಿಯಲ್ಸ್ ಕಂಪನಿಗೆ 140 ಎಕರೆ ಹಂಚಿಕೆ ಮಾಡಲು ಇತ್ತೀಚೆಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಿದೆ.

ರಾಜ್ಯದಲ್ಲಿ ಸೆಮಿಕಂಡಕ್ಟರ್ ಉದ್ಯಮವನ್ನು ಬೆಳೆಸಲು ಅಪ್ಲೈಡ್ ಮೆಟೀರಿಯಲ್ಸ್ ಯೋಜನೆ ಅನುಷ್ಠಾನಕ್ಕೆ ಅವಕಾಶ ನೀಡುವುದರಿಂದ ಈ ಕ್ಷೇತ್ರದ ಬೆಳವಣಿಗೆಗೆ ಒಂದು ಉತ್ತಮ ಅವಕಾಶ ನೀಡಿದಂತಾಗುತ್ತದೆ. ಸಂಶೋಧನೆ ಮತ್ತು ಅಭಿವೃದ್ಧಿಗೆ ಸೂಕ್ತ ವಾತಾವರಣ ನಿರ್ಮಿಸಲು ಸಾಧ್ಯ ಎಂದು ಸಚಿವ ಸಂಪುಟ ಸಭೆಗೆ ಮಂಡಿಸಿದ ಪ್ರಸ್ತಾವದಲ್ಲಿ ಪ್ರತಿಪಾದಿಸಿದೆ.

ಹಂಚಿಕೆ ಮಾಡಿದ ಭೂಮಿ ದುರ್ಬಳಕೆ ಆಗಬಾರದು ಮತ್ತು ₹3,600 ಕೋಟಿ ಬಂಡವಾಳ ಹೂಡಿಕೆ ಆಗಬೇಕು ಎಂದು ಸರ್ಕಾರ ಷರತ್ತು ವಿಧಿಸಿದೆ.

ಅಪ್ಲೈಡ್ ಮೆಟೀರಿಯಲ್ಸ್‌ಗೆ ಅನುಕೂಲ ಮಾಡಿಕೊಡಲು ನೀತಿಯಲ್ಲಿ ಇನ್ನೂ ಒಂದು ಮಾರ್ಪಾಡು ಮಾಡಲಾಗಿದೆ. ಜಾಗತಿಕ ಮಟ್ಟದಲ್ಲಿ ಖ್ಯಾತಿ ಪಡೆದ ಸೆಮಿಕಂಡಕ್ಟರ್ ಉತ್ಪಾದನಾ ಮತ್ತು ಸಂಬಂಧಿತ ಚಟುವಟಿಕೆ ನಡೆಸುವ ಕಂಪನಿಗಳು ಹೂಡಿಕೆಗೆ ಮುಂದೆ ಬಂದರೆ ಸ್ಪರ್ಧಾತ್ಮಕ ಬಿಡ್ಡಿಂಗ್ ಇಲ್ಲದೆ ಬಿಎಸ್‌ಬಿಪಿಯಲ್ಲಿ ಜಮೀನು ಹಂಚಿಕೆ ಮಾಡಲು ಸರ್ಕಾರ ಮುಂದಾಗಿದೆ.

ರಾಜ್ಯ ಸರ್ಕಾರ ಬಿಎಸ್‌ಬಿಪಿಯಲ್ಲಿ ಮೂಲಸೌಕರ್ಯ ನಿರ್ಮಾಣಕ್ಕೆ ₹433.72 ಕೋಟಿ ವೆಚ್ಚ ಮಾಡಿದೆ. ಇಲ್ಲಿ ನೀರು ಪೂರೈಕೆ ಮೂಲಸೌಕರ್ಯ ಅಭಿವೃದ್ಧಿಪಡಿಸಲು ₹780 ಕೋಟಿ ವೆಚ್ಚವಾಗಬಹುದು ಎಂದು ಕೆಎಸ್‌ಐಐಡಿಸಿ ಅಂದಾಜು ಮಾಡಿದೆ. ಹೀಗಾಗಿ ಅಪ್ಲೈಡ್ ಮೆಟೀರಿಯಲ್ಸ್‌ಗೆ ನಿಗದಿ ಮಾಡಿರುವ ಚದರಡಿಗೆ ₹1,288ರ ದರ ನೀರು ಪೂರೈಕೆ ವೆಚ್ಚದ ಅನುಪಾತವನ್ನೂ ಒಳಗೊಂಡಿರಬೇಕು ಎಂದು ಹಣಕಾಸು ಇಲಾಖೆ ಅಭಿಪ್ರಾಯಪಟ್ಟಿದೆ.

ಒಟ್ಟು 407 ಎಕರೆಯ ಬಿಎಸ್‌ಬಿಪಿ ಈಗ ಸೆಮಿಕಂಡಕ್ಟರ್ ಪಾರ್ಕ್ ಆಗಿ ಅಭಿವೃದ್ಧಿಗೊಂಡಿದೆ. ಈಗಾಗಲೇ ಅಪ್ಲೈಡ್ ಮೆಟೀರಿಯಲ್ಸ್ ಕಂಪನಿಗೆ 140 ಎಕರೆ ಹಂಚಿಕೆ ಮಾಡಲಾಗಿದೆ. ಈ ಕಂಪನಿಗೆ ಅನುಸರಿಸಿರುವ ಭೂಹಂಚಿಕೆ ನೀತಿಯು ಉಳಿದಿರುವ 267 ಎಕರೆಗೂ ಅನ್ವಯವಾಗಲಿದೆ.

# ತೀಸ್ತಾ ನದಿ ಯೋಜನೆ: ಚೀನಾ ಬೆಂಬಲ ಕೋರಿದ ಬಾಂಗ್ಲಾ

ಬೀಜಿಂಗ್ (ಪಿಟಿಐ): ತೀಸ್ತಾ ನದಿ ಪುನರುಜ್ಜೀವನ ಯೋಜನೆಯನ್ನು ಬೆಂಬಲಿಸುವಂತೆ ಹಾಗೂ ಈ ಯೋಜನೆಯಲ್ಲಿ ಭಾಗಿಯಾಗುವಂತೆ ಬಾಂಗ್ಲಾದೇಶವು ಚೀನಾಕ್ಕೆ ಮನವಿ ಮಾಡಿರುವುದು ಭಾರತದ ಕಳವಳಕ್ಕೆ ಕಾರಣವಾಗಿದೆ.

ಬಾಂಗ್ಲಾದೇಶದ ಪ್ರಧಾನಿ ತಾರಿಕ್ ರೆಹಮಾನ್ ಸದ್ಯ ಚೀನಾ ಪ್ರವಾಸದಲ್ಲಿದ್ದು, ತೀಸ್ತಾ ನದಿ ಸಮಗ್ರ ನಿರ್ವಹಣೆ ಮತ್ತು ಪುನರುಜ್ಜೀವನ ಯೋಜನೆಗೆ (ಟಿಆರ್‌ಸಿಎಂಆರ್‌ಪಿ) ಚೀನಾದ ಆರ್ಥಿಕ ನೆರವು ಕೋರಿದ್ದಾರೆ.

ಬಾಂಗ್ಲಾದೇಶದ ವಿದೇಶಾಂಗ ಸಚಿವ ಖಲೀಲುರ್ ರೆಹಮಾನ್ ಮತ್ತು ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ಅವರು ಬುಧವಾರ ಬೀಜಿಂಗ್‌ನಲ್ಲಿ ತೀಸ್ತಾ ನದಿ ಪುನರುಜ್ಜೀವನ ಯೋಜನೆ ಬಗ್ಗೆ ಮಾತುಕತೆ ನಡೆಸಿದ್ದಾರೆ ಎಂದು ಬಾಂಗ್ಲಾದೇಶದ ಸರ್ಕಾರಿ ಸ್ವಾಮ್ಯದ ಬಿಎಸ್‌ಎಸ್ ಸುದ್ದಿಸಂಸ್ಥೆ ವರದಿ ಮಾಡಿದೆ.

ಸಿಕ್ಕಿಂನಲ್ಲಿ ಹುಟ್ಟಿ, ಪಶ್ಚಿಮ ಬಂಗಾಳದ ಮೂಲಕ ಬಾಂಗ್ಲಾದತ್ತ ಹರಿದು ನಂತರ ಬ್ರಹ್ಮಪುತ್ರ ನದಿಯನ್ನು ಸೇರುವ ತೀಸ್ತಾ ನದಿಯನ್ನು ಸಂರಕ್ಷಿಸುವ ಯೋಜನೆ ಇದಾಗಿದೆ. ಆದರೆ, ಚೀನಾ ಈ ಯೋಜನೆಯನ್ನು ಅನುಷ್ಠಾನಗೊಳಿಸಿದರೆ ಅದು ದೇಶದ ಭದ್ರತೆಯ ದೃಷ್ಟಿಯಿಂದ ಒಳಿತಲ್ಲ ಹಾಗೂ ತೀಸ್ತಾ ನದಿ ನೀರು ಹಂಚಿಕೆಗೆ ಸಂಬಂಧಿಸಿದಂತೆ ನನೆಗುದಿಗೆ ಬಿದ್ದಿರುವ ಭಾರತ-ಬಾಂಗ್ಲಾ ಮಾತುಕತೆ ಮೇಲೂ ವ್ಯತಿರಿಕ್ತ ಪರಿಣಾಮ ಬೀರಲಿದೆ ಎನ್ನುವ ಕಳವಳ ಭಾರತದ್ದು.

ಖಲೀಲುರ್ ರೆಹಮಾನ್ ಜತೆಗೆ ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ನಡೆಸಿದ ಮಾತುಕತೆಯಲ್ಲಿ, ಬಾಂಗ್ಲಾದೇಶದ ಮೂಲಸೌಕರ್ಯ, ಸಾರಿಗೆ, ಉದ್ಯಮ ಕ್ಷೇತ್ರಗಳಲ್ಲಿ ದೀರ್ಘಾವಧಿ ಪಾಲುದಾರಿಕೆ- ಹೂಡಿಕೆಗೆ ಸಹಮತ ವ್ಯಕ್ತಪಡಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

**ಚಿಟಿಕೆ ಸುದ್ದಿ**

## ಮಲಯಾಳಕ್ಕೆ 'ಮಹಾ ಮಾನವತಾವಾದಿ ಬಸವಣ್ಣ' ಕೃತಿ

ಮೈಸೂರು: ನಗರದ ಕಲಾವಿದ ಎಲ್.ಶಿವಲಿಂಗಪ್ಪ ಅವರ 'ಮಹಾಮಾನವತಾವಾದಿ ಬಸವಣ್ಣ' ಕೃತಿಯ ಮಲಯಾಳಂ ಅನುವಾದಿತ ಕೃತಿಯು ಮೇ 10ರಂದು ಕೇರಳದ ಅಲಪ್ಪುಳ ಜಿಲ್ಲೆಯ ಓಚಿರಾ ಪಟ್ಟಣದಲ್ಲಿ ನಡೆಯುವ ಬಸವ ಜಯಂತಿ ಕಾರ್ಯಕ್ರಮದಲ್ಲಿ ಬಿಡುಗಡೆಯಾಗಲಿದೆ. ಚಿತ್ರ-ಕಥೆ ಮಾದರಿಯ ಕೃತಿಯನ್ನು ಮೈಸೂರು ವಿಶ್ವವಿದ್ಯಾಲಯದ ಪ್ರಾದೇಶಿಕ ಭಾಷಾ ಕೇಂದ್ರದಲ್ಲಿರುವ ಮಲಯಾಳಂ ಉಪನ್ಯಾಸಕಿ ಎಂ.ಪಿ.ನಿರ್ಮಲಾ ಅನುವಾದಿಸಿದ್ದಾರೆ. ಮಲಯಾಳಂ ಲೇಖಕ ಕೆ.ಪ್ರಸನ್ನಕುಮಾರ್ ಮುನ್ನುಡಿ ಬರೆದಿದ್ದಾರೆ. ಅರಣ್ಯ ಸಚಿವ ಈಶ್ವರ ಖಂಡ್ರೆ, ಸಿಪಿಎಂ ಮುಖಂಡ ಸಾಜಿ ಚೆರಿಯನ್ ಬಿಡುಗಡೆ ಮಾಡುವರು ಎಂದು ಪ್ರಕಟಣೆ ತಿಳಿಸಿದೆ.

# ಅಳಿವಿನಂಚಿನ 23 ರಣಹದ್ದು ಪತ್ತೆ

## ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಗಣತಿ ಕಾರ್ಯ

• ಎಚ್.ಎಸ್.ಸಚ್ಚಿತ್

ಹುಣಸೂರು (ಮೈಸೂರು ಜಿಲ್ಲೆ): ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಅಳಿವಿನಂಚಿನ ವಿವಿಧ ಪ್ರಭೇದದ 23 ರಣಹದ್ದುಗಳು ಪತ್ತೆಯಾಗಿವೆ.

'ಐಯುಸಿಎನ್' ಕೆಂಪುಪಟ್ಟಿಯಲ್ಲಿರುವ ಬಿಳಿ ಗರಿಯ ರಣಹದ್ದು (ವೈಟ್ ರಂಪ್ಡ್ ವಲ್ಚರ್), ಕೆಂಪು ತಲೆಯ ರಣಹದ್ದು, ನೀಳಕೊಕ್ಕಿನ ರಣಹದ್ದು (ಇಂಡಿಯನ್ ವಲ್ಚರ್) ಮತ್ತು ಈಜಿಪ್ಟ್ ತಳಿಯ ರಣಹದ್ದುಗಳು ಫೆಬ್ರುವರಿಯಲ್ಲಿ ನಡೆದ ಗಣತಿಯಲ್ಲಿ ಕಾಣಿಸಿಕೊಂಡಿವೆ.

8 ವೀಕ್ಷಣಾ ಗೋಪುರಗಳಲ್ಲಿ ಕಂಡ ಬಿಳಿ ಗರಿಯ 11, ನೀಳಕೊಕ್ಕಿನ 2 ಮತ್ತು ಕೆಂಪು ತಲೆಯ 7, ಭಾರತದ 2 ಮತ್ತು ಈಜಿಪ್ಟ್‌ನ 1 ಹದ್ದು ಕಾಣಿಸಿದೆ.

> ರಣಹದ್ದು ಸಂತತಿ ಹೆಚ್ಚಾಗಲು ಪೂರಕ ವಾತಾವರಣ ನಾಗರಹೊಳೆಯಲ್ಲಿದೆ. ಗಣತಿಯಲ್ಲಿ ಎರಡು ಗೂಡುಗಳಲ್ಲಿ ಮರಿ ಹಾಗೂ ಮೊಟ್ಟೆಗಳು ಕಂಡುಬಂದಿವೆ
>
> **ಸೀಮಾ,** ಡಿಸಿಎಫ್, ನಾಗರಹೊಳೆ

'ದೇಶದಲ್ಲಿ 9 ಜಾತಿ ರಣಹದ್ದುಗಳಿವೆ. ರಾಮನಗರದ ರಾಮದೇವರ ಬೆಟ್ಟದ ರಣಹದ್ದು ಪಕ್ಷಿಧಾಮದಲ್ಲಿ ಅತಿ ಹೆಚ್ಚು, ಅಂದರೆ 65 ಇವೆ. ಹುಲಿ ಸಂರಕ್ಷಣೆ ಯೋಜನೆಗಳ ಪ್ರಭಾವದಿಂದ ನಾಗರಹೊಳೆಯಲ್ಲೂ ಅವುಗಳ ಸಂತತಿ ಹೆಚ್ಚಿದೆ' ಎನ್ನುತ್ತಾರೆ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಎಸಿಎಫ್ ಲಕ್ಷ್ಮಿಕಾಂತ್.



ನಾಗರಹೊಳೆ ಅರಣ್ಯದಲ್ಲಿ ನೀಳಕೊಕ್ಕಿನ ರಣಹದ್ದುಗಳ ಗುಂಪು

ತಮಿಳುನಾಡಿನ ಮುದುಮಲೈ, ಸತ್ಯಮಂಗಲ ಅರಣ್ಯ ಪ್ರದೇಶ, ರಾಜ್ಯದ ಬಿಳಿಗಿರಿ ರಂಗಯ್ಯನಬೆಟ್ಟ, ಬಂಡಿಪುರ, ನಾಗರಹೊಳೆ, ರಾಮನಗರ ಸೇರಿ ವಿವಿಧೆಡೆ 213 ರಣಹದ್ದುಗಳಿದ್ದು, ಆ ಪೈಕಿ ರಾಜ್ಯದಲ್ಲಿ 117 ಇವೆ.

'ಅಧ್ಯಯನಕ್ಕಾಗಿ ಮಧ್ಯ ಭಾರತದ ಅರಣ್ಯ ಪ್ರದೇಶದಲ್ಲಿ ರಣಹದ್ದಿಗೆ ರೇಡಿಯೊ ಕಾಲರ್ ಅಳವಡಿಸಲಾಗುತ್ತದೆ. ರಣಹದ್ದುಗಳು ದಿನಕ್ಕೆ ಸುಮಾರು 300 ಕಿ.ಮೀವರೆಗೆ ಚಲಿಸುತ್ತವೆ. 6 ಗಂಟೆಯಿಂದ 8 ಗಂಟೆ ಹಾರಾಟ ನಡೆಸುತ್ತವೆ' ಎಂದು ವನ್ಯಜೀವಿ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

'ಹುಲಿ, ಆನೆ ಗಣತಿಯಂತೆ ಹದ್ದುಗಳ ಗಣತಿ ಸುಲಭವಲ್ಲ. ಅಟ್ಟಣಿಗೆ ಮೇಲೆ ಕುಳಿತು ಎತ್ತರ ಪ್ರದೇಶದಲ್ಲಿ ಹದ್ದುಗಳನ್ನು ಗುರುತಿಸಿ ದಾಖಲಿಸುತ್ತೇವೆ' ಎನ್ನುತ್ತಾರೆ ಅಧಿಕಾರಿಗಳು.

**'ಔಷಧ ನಿಷೇಧ: ಸಂತತಿ ಹೆಚ್ಚಳ'**

'ಅರಣ್ಯದಂಚಿನಲ್ಲಿ ರೋಗಗ್ರಸ್ತ ಜಾನುವಾರುಗಳ ಚಿಕಿತ್ಸೆಗೆ ಡೈಕ್ಲೋಫಿನಾಕ್ ಸೋಡಿಯಂ ಔಷಧ ಬಳಸಲಾಗುತ್ತಿತ್ತು, ಅದರ ಅಂಶ ಪ್ರಾಣಿ ಸತ್ತ ನಂತರವೂ ಕಳೇಬರದಲ್ಲಿ ಉಳಿಯುತ್ತಿತ್ತು, ದೇಹ ತಿನ್ನುತ್ತಿದ್ದ ರಣಹದ್ದುಗಳು ಸಾಯುತ್ತಿದ್ದವು. ಈಗ ಔಷಧವನ್ನು ದೇಶದಲ್ಲಿ ನಿಷೇಧಿಸಿದ್ದು, ಅವುಗಳ ಸಂತತಿ ಉಳಿಯಲು ಸಹಕಾರಿಯಾಗಿದೆ' ಎಂದು ಎಸಿಎಫ್ ಲಕ್ಷ್ಮಿಕಾಂತ್ 'ಪ್ರಜಾವಾಣಿ'ಗೆ ತಿಳಿಸಿದರು.



### ಕರ್ನಾಟಕ ಹಾಗೂ ತಮಿಳುನಾಡು ನಡುವಿನ ದಕ್ಷಿಣ ಪಿನಾಕಿನಿ ಜಲ ವಿವಾದ

# ನ್ಯಾಯಮಂಡಳಿ: 6 ತಿಂಗಳ ಕಾಲಾವಕಾಶ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಹಾಗೂ ತಮಿಳುನಾಡು ನಡುವಿನ ಪೆನ್ನಾರ್ (ದಕ್ಷಿಣ ಪಿನಾಕಿನಿ) ನದಿ ನೀರು ಹಂಚಿಕೆ ವಿವಾದಗಳನ್ನು ಬಗೆಹರಿಸಲು ನ್ಯಾಯಮಂಡಳಿ ಸ್ಥಾಪಿಸಲು ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಆರು ತಿಂಗಳ ಕಾಲಾವಕಾಶ ನೀಡಿದೆ.

ಜಲವಿವಾದ ಬಗೆಹರಿಸಲು ಒಂದು ತಿಂಗಳಲ್ಲಿ ನ್ಯಾಯಮಂಡಳಿ ರಚಿಸಬೇಕು ಎಂದು ನ್ಯಾಯಮೂರ್ತಿ ವಿಕ್ರಮ್‌ನಾಥ್ ನೇತೃತ್ವದ ಪೀಠವು ಜಲಶಕ್ತಿ ಸಚಿವಾಲಯಕ್ಕೆ ಫೆಬ್ರುವರಿ 2ರಂದು ನಿರ್ದೇಶನ ನೀಡಿತ್ತು.

ಈ ಸಂಬಂಧ ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದ್ದ ಜಲಶಕ್ತಿ ಸಚಿವಾಲಯ, 'ನ್ಯಾಯಮಂಡಳಿ ರಚನೆಗೆ ಆರು ತಿಂಗಳ ಕಾಲಾವಕಾಶ ನೀಡಬೇಕು' ಎಂದು ಮನವಿ ಮಾಡಿತ್ತು.

ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯ ಭಾಟಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರ ಪೀಠ ಶುಕ್ರವಾರ ಪುರಸ್ಕರಿಸಿತು. ಈ ವಿಷಯದಲ್ಲಿ ಸರ್ಕಾರವು ತ್ವರಿತ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎಂದು ಭಾಟಿ ಅವರು ಪೀಠದ ಗಮನಕ್ಕೆ ತಂದರು.

ಕರ್ನಾಟಕ ಸರ್ಕಾರದ ಪರ ವಾದ ಮಂಡಿಸಿದ ಹೆಚ್ಚುವರಿ ಅಡ್ವೊಕೇಟ್ ಜನರಲ್ ನಿಶಾಂತ್ ಪಾಟೀಲ, 'ಇದೊಂದು ಸಣ್ಣ ಜಲವಿವಾದ' ಎಂದರು. 'ನ್ಯಾಯಪೀಠದ ನಿರ್ದೇಶನ ಪಾಲಿಸಲು ಸಚಿವಾಲಯವು ಅಗತ್ಯ ಕ್ರಮ ಕೈಗೊಳ್ಳುತ್ತಿದೆ. ನ್ಯಾಯಮಂಡಳಿ ರಚನೆಗೆ ಅಂತರ್ ಇಲಾಖೆಗಳ ಜತೆಗೆ ಸಮಾಲೋಚನೆ ನಡೆಸಲಾಗಿದೆ. ವಿವಿಧ ಇಲಾಖೆಗಳ ಅಭಿಪ್ರಾಯ ಪಡೆದು ಸಚಿವ ಸಂಪುಟ ಟಿಪ್ಪಣಿ ಸಿದ್ಧಪಡಿಸಲಾಗಿದೆ. ಕೇಂದ್ರ ಸಚಿವ ಸಂಪುಟದ ಪರಿಗಣನೆಗೆ ಕರಡು ಟಿಪ್ಪಣಿಯನ್ನು ಸಂಪುಟ ಕಾರ್ಯದರ್ಶಿ ಅವರಿಗೆ ಕಳುಹಿಸಲಾಗಿದೆ' ಎಂದು ಜಲಶಕ್ತಿ ಸಚಿವಾಲಯವು ಅರ್ಜಿಯಲ್ಲಿ ತಿಳಿಸಿತ್ತು.

'ಸಂಪುಟದ ಅನುಮೋದನೆಯ ನಂತರ, ಅಂತರರಾಜ್ಯ ನದಿ ನೀರು ವಿವಾದ ಕಾಯ್ದೆ- 1956ರ ಪ್ರಕಾರ ನ್ಯಾಯಮಂಡಳಿಗೆ ಅಧ್ಯಕ್ಷರು ಮತ್ತು ಸದಸ್ಯರ ಹುದ್ದೆಗೆ ನಾಮನಿರ್ದೇಶನ ಮಾಡುವಂತೆ ಭಾರತದ ಮುಖ್ಯ ನ್ಯಾಯಮೂರ್ತಿ ಅವರಿಗೆ ಕೋರಿಕೆ ಸಲ್ಲಿಸಲಾಗುತ್ತದೆ. ನಾಮನಿರ್ದೇಶನ ಮಾಡಿದ ನಂತರ, ಕರಡು ಅಧಿಸೂಚನೆಯನ್ನು ಕಾನೂನು ವ್ಯವಹಾರಗಳ ಸಚಿವಾಲಯ ಸಿದ್ಧಪಡಿಸುತ್ತದೆ. ಆ ನಂತರ, ನ್ಯಾಯಮಂಡಳಿ ರಚನೆಯ ಅಧಿಸೂಚನೆ ಹೊರಡಿಸಲಾಗುತ್ತದೆ. ಈ ಪ್ರಕ್ರಿಯೆಗಳನ್ನು ನಡೆಸಲು ಸಮಯಾವಕಾಶ ಬೇಕಾಗುತ್ತದೆ' ಎಂದು ಸಚಿವಾಲಯ ತಿಳಿಸಿತ್ತು.

**ಮುಖ್ಯಾಂಶಗಳು**

- ಜಲಶಕ್ತಿ ಸಚಿವಾಲಯಕ್ಕೆ ಫೆಬ್ರುವರಿ 2ರಂದು ನಿರ್ದೇಶನ
- ನ್ಯಾಯಮಂಡಳಿ ರಚನೆಗೆ ಅಂತರ್ ಇಲಾಖೆಗಳ ಜತೆಗೆ ಸಮಾಲೋಚನೆ
- ಕೇಂದ್ರ ಸಚಿವ ಸಂಪುಟದ ಪರಿಗಣನೆಗೆ ಕರಡು ಟಿಪ್ಪಣಿ

**ಸುಪ್ರೀಂ ಮೆಟ್ಟಿಲೇರಿದ್ದ ತಮಿಳುನಾಡು**

ದಕ್ಷಿಣ ಪಿನಾಕಿನಿ ನದಿಯ ಕಣಿವೆಯಲ್ಲಿ ಕರ್ನಾಟಕ ಸರ್ಕಾರವು ಮಾರ್ಕಂಡೇಯ ನದಿಗೆ ಅಡ್ಡಲಾಗಿ ಅಣೆಕಟ್ಟೆ ನಿರ್ಮಿಸಿದೆ. ಬೆಂಗಳೂರಿನ ಎಲೆ ಮಲ್ಲಪ್ಪಚೆಟ್ಟಿ ಕೆರೆಯಿಂದ ಹೊಸಕೋಟೆಯವರೆಗೆ ನೀರು ಹರಿಸುವ ಕಾಮಗಾರಿ ಹಾಗೂ ಬ್ಯಾಲಹಳ್ಳಿ ಗ್ರಾಮದ ಹತ್ತಿರ ಪೆನ್ನಾರ್ ನದಿಯಿಂದ ನೀರು ಹರಿಸುವ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದೆ. ಈ ಯೋಜನೆಗೆ ವಿರೋಧ ವ್ಯಕ್ತಪಡಿಸಿ ತಮಿಳುನಾಡು ಸರ್ಕಾರವು 2018ರಲ್ಲಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು.

------------------------------------------ಶುಭವಂದನೆಗಳು------------------------------------------

